ಮೈಸೂರು ಸರ್ಕಾರದ ಚೀಫ್ ಸೆಕ್ರೆಟರಿಗಳ ಈ ಆಜ್ಞೆಯಿಂದ ಶ್ರೀ ತಿಮ್ಮಾರೆಡ್ಡಿಯವರ ನಾಗರಿಕ ಹಕ್ಕುಬಾಧ್ಯತೆಗಳು ಹೇಗೆ ಕಂಠಿತವಾಗಿವೆ ಎಂಬುದನ್ನು ಗಮನಿಸಬೇಕು. ಅವರು ಏಕ್‌ದಂ ಒಂದು ಗೊತ್ತಾದ ಅವಧಿಯೊಳಗೆ ಅವರ ಸ್ವಂತ ಊರಿಗೆ ಹೋಗಬೇಕು. ಅಲ್ಲಿಯೇ ಆರು ತಿಂಗಳ ಕಾಲ ನೆಲೆಸಿರಬೇಕು. ಅಲ್ಲಿರುವಾಗ್ಗೆ ಭಾಷಣಗಳನ್ನು ಮಾಡಕೂಡದು, ಪತ್ರಿಕೆಗಳಿಗೆ ಹೇಳಿಕೆ ಕೊಡಕೂಡದು. ಇವು ಆ ಆಜ್ಞೆಯ ಷರತ್ತುಗಳು. ಶ್ರೀ ತಿಮ್ಮಾರೆಡ್ಡಿಯವರ ನಿತ್ಯ ಸಂಸಾರಜೀವನದ ಹೊರತಾಗಿ ಹೊರಗಿನ ಎಲ್ಲಾ ಚಟುವಟಿಕೆಗಳಿಗೂ ಈ ಆಜ್ಞೆಯಿಂದ ಅಡ್ಡಿ ಉಂಟಾಗಿದೆ. ಶ್ರೀ ತಿಮ್ಮಾರೆಡ್ಡಿಯವರ ಸ್ವಗ್ರಾಮವು ನಾಗಸಂದ್ರವಾದರೂ ಅವರ ಚಟುವಟಿಕೆಗಳೆಲ್ಲಾ ಇಲ್ಲಿಯೇ ಇದ್ದವು ಅಂತಹವರನ್ನು ಆಜ್ಞಾಪ್ರಕಾರ ಅವರ ಊರಿಗೆ ಕಳುಹಿಸಿ ಅಲ್ಲಿ ಈ ರೀತಿ ಪ್ರತಿಬಂಧಿಸುವುದು ಸರಿಯಲ್ಲ. ರಾಜಭಕ್ತಿಯುತರಾದ ಮೈಸೂರು ಪ್ರಜೆಗಾರಿಗೂ ಇಂತಹ ಆಜ್ಞೆ ಬೇಕಾಗಿಲ್ಲ.

ಜಗತ್ತು ಬದಲಾಯಿಸುತ್ತಿದೆ. ನಾಗರಿಕ ಸ್ವಾತಂತ್ರ್ಯಗಳು ಹೆಚ್ಚುತ್ತಿವೆ. ಪ್ರಜಾಭಿಪ್ರಾಯಕ್ಕೆ ಮನ್ನಣೆ ದೊರೆಯುತ್ತಿದೆ. ಇಂತಹ ಸನ್ನಿವೇಶದಲ್ಲಿ ಈ ಸ್ವರೂಪದ ಆಜ್ಞೆಗಳನ್ನು ಹಾಕಬೇಕಾಗಿಯೇ ಇಲ್ಲ. ಏನಿದ್ದರೂ ಸರ್ಕಾರದ ಚೀಫ್ ಸೆಕ್ರೆಟರಿಗಳು ಶ್ರೀ ರೆಡ್ಡಿಯವರನ್ನು ಕರೆಸಿಕೊಂಡು ಸರ್ಕಾರದ ಮನೋಭಾವವನ್ನು ಅವರಿಗೆ ತಿಳಿಸಬಹುದಾಗಿತ್ತು. ಪರಸ್ಪರ ವಿಚಾರ ವಿನಿಮಯಗಳಿಂದ ಬಗೆಹರಿಯುತ್ತಿದ್ದ ವಿಷಯಕ್ಕೆ ಇಷ್ಟು ಅಡ್ಡಿ ಆಡಚಣೆಗಳೇತಕ್ಕೆ? ಸರ್ಕಾರದವರು ಆ ಆಜ್ಞೆಯನ್ನು ಕೂಡಲೇ ವಾಪಸು ತೆಗೆದುಕೊಳ್ಳುವರೆಂದು ನಂಬಿದ್ದೇವೆ

——:o:——

The Tai nadu. 18.8.45

TAINADU ೧೫ನೇ ಆಗಸ್ಟ್ ೧೯೪೫

The Tainadu.
18.8.45

The "Tainadu" publishes a report of the arrest of Sri N. C. Thimmareddy.

Submitted

ಶ್ರೀ ಎನ್. ಸಿ. ತಿಮ್ಮಾರೆಡ್ಡಿಯವರ ಬಂಧನ

ನಾಗಸಂದ್ರ ಗ್ರಾಮಕ್ಕೆ ಕರೆದೊಯ್ಯಲಾಯಿತು

ಬೆಂಗಳೂರು ೧೭ನ

ಮೈಸೂರು ಕಾಂಗ್ರೆಸ್ ಮುಖಂಡರೂ ಕಾಂಗ್ರೆಸ್ಸಿನ ಪ್ರಚಾರ ಮತ್ತು ವಿದೇಶಾಂಗ ನೀತಿಗೆ ಸಂಬಂಧಪಟ್ಟ ಶಾಖೆಯ ಮುಖ್ಯಾಧಿಕಾರಿಗಳೂ ಆದ ಶ್ರೀ ಎನ್.ಸಿ. ತಿಮ್ಮಾರೆಡ್ಡಿಯವರನ್ನು ಈ ಮಧ್ಯಾಹ್ನ ೧೨-೩೦ ಗಂಟೆಗೆ ಸ್ಪೆಷಲ್ ಬ್ರಾಂಚ್ ಪೋಲೀಸ್ ಇನ್‌ಸ್ಪೆಕ್ಟರಾದ ಶ್ರೀ ಟಿ.ಕೆ. ನಾರಾಯಣಮೂರ್ತಿಯವರು ಗಾಂಧೀನಗರದಲ್ಲಿರುವ ವಾರ್ಡನ್ ಇಹ್ಯೂರೆನ್ಸ್ ಕಚೇರಿಯಲ್ಲಿ ತಮ್ಮ ಕಸ್ಟಡಿಗೆ ತೆಗೆದುಕೊಂಡು ಅವರನ್ನು ಗೋವೇಬಿನಹೂರು ತಾಲ್ಲೂಕು ನಾಗಸಂದ್ರ ಗ್ರಾಮಕ್ಕೆ ಪೋಲೀಸ್ ವ್ಯಾನಿನಲ್ಲಿ ಕರೆದೊಯ್ದರು.

ಶ್ರೀಗೆಳಾದ ಕೆ.ಆರ್. ಮಾಧವರಾವ್, ಹೆಚ್.ಕೆ. ವೀರಣ್ಣಗೌಡ, ಮತ್ತು ಅನೇಕ ಪತ್ರಿಕಾಪ್ರತಿನಿಧಿಗಳು ಆ ಸಮಯದಲ್ಲಿ ಶ್ರೀ ತಿಮ್ಮಾರೆಡ್ಡಿಯವರ ಕಾರಿನೆಯಲ್ಲಿ ಹಾಜರಿದ್ದರು. ಅವರು ಪೋಲೀಸ್ ವ್ಯಾನ್ ಹತ್ತುವ ಸಮಯದಲ್ಲಿ ಶ್ರೀ ಕೆ.ಆರ್. ಮಾಧವರಾಯರು ಖಾದಿ ಹಾರವನ್ನು ಹಾಕಲು ಪ್ರಯತ್ನಿಸಿದರು. ಆದರೆ ಪೋಲೀಸಿನವರು ಕಡೆದರು. ಹಾರವನ್ನು ಕೈಲಿನಲ್ಲಿಯೇ ಕೊಡಲಾಯಿತು.

ಶ್ರೀ ರೆಡ್ಡಿಯವರನ್ನು ಐ.ಜಿ.ಪಿ. ಯವರ ಮುಂದೆ ಹಾಜರುಪಡಿಸಿ ನಂತರ ನಾಗಸಂದ್ರ ಗ್ರಾಮಕ್ಕೆ ಒಯ್ಯಲಾಯಿತೆಂದು ಗೊತ್ತಾಗಿದೆ.

ಶ್ರೀ ತಿಮ್ಮಾರೆಡ್ಡಿಯವರು ತಮ್ಮ ಮೇಲೆ ಹಾಕಲಾಗಿರುವ ಆಜ್ಞೆ ಮತ್ತು ತಾವು ಅದರ ಬಗ್ಗೆ ಅನುಸರಿಸಿದ ಕಾರ್ಯಕ್ರಮ ಇವುಗಳನ್ನೆಲ್ಲಾ ವಿವರಿಸಿ ಸರ್ದಾರ್ ವಲ್ಲಭಾಯಿ ಪಟೇಲರಿಗೆ ಒಬ್ಬ ವಿಶೇಷ ಪ್ರತಿನಿಧಿಯ ಮೂಲಕ ಪತ್ರ ಬರೆದು ಕಳುಹಿಸಿದ್ದಾರೆ ಎಂಬುದು ಗೊತ್ತಾಗಿದೆ.

ಶ್ರೀ ತಿಮ್ಮಾರೆಡ್ಡಿಯವರ ಹೇಳಿಕೆ

ಶ್ರೀ ಎನ್.ಸಿ ತಿಮ್ಮಾರೆಡ್ಡಿಯವರನ್ನು ಬಂಧಿಸುವುದಕ್ಕೆ ಮುಂಚೆ ಅವರು ಒಂದು ಹೇಳಿಕೆಯನ್ನಿತ್ತರು, ಸರ್ಕಾರವು ತಮ್ಮ ಮೇಲೆ ವಿಧಿಸಿರುವ ಪ್ರತಿಬಂಧ ಕಾಜ್ಞೆಯು ಅಯುಕ್ತವಾಗಿದೆಯೆಂದೂ ಯಾವ ಗೌರವಯುತ ಪ್ರಜೆಗೂ ಕೂಡಅವ ಸಾನವನ್ನುಂಟಿ ಮಾಡುವುದೆಂದೂ ಹೇಳಿ ಇಂತಹ ಪ್ರತಿಬಂಧಕಾಜ್ಞೆಯು ತಮಗೊಬ್ಬರಿಗೇ ಅಲ್ಲವೆಂದೂ ಸಂಸ್ಥಾನದ ಇನ್ನೂ ಇತರ ೧೬೫ ಜನರು ಒಂದಲ್ಲ ಒಂದು ರೀತಿಯ ಪ್ರತಿಬಂಧಕಕ್ಕೆ, ಇನ್ನೂ ಹೆಚ್ಚಿನ ಕಠಿಣತರವಾದ ಪ್ರತಿಬಂಧಕಕ್ಕೆ, ಒಳಗಾಗಿದ್ದಾರೆಂದೂ ಅನೇಕರು ಸಂಸ್ಥಾನದಿಂದಲೇ ಗಡೀಪಾರಾಗಿದ್ದಾರೆಂದೂ ತಿಳಿಸಿ ಸಂಸ್ಥಾನದಲ್ಲಿಯೂ ಹೊರಗೂ ಸಾರ್ವಜನಿಕರ ಗಮನವನ್ನು ಇತ್ತಕಡೆ ಎಳೆಯುವ ಉದ್ದಿಶ್ಯದಿಂದ ತಾವು ಈಗ ಈ ರೀತಿ ನಡೆಯುತ್ತಿರುವುದಾಗಿಯೂ ತಿಳಿಸಿದರು.

45

35

TAINAL 16-8-1945

ಶ್ರೀ ತಿಮ್ಮಾರೆಡ್ಡಿಯವರ ಮೇಲೆ ಆಜ್ಞೆ

ನಾಗಸಂದ್ರ ಗ್ರಾಮದಲ್ಲಿಯೇ ನೆಲಸಬೇಕು

ಬೆಂಗಳೂರು ೧೫

ಶ್ರೀ ಎಂ. ಸಿ. ತಿಮ್ಮಾರೆಡ್ಡಿಯವರು ತಮ್ಮ ಸ್ವಸ್ಥಾನವಾದ ನಾಗಸಂದ್ರ ಗ್ರಾಮಕ್ಕೆ ಹೋಗಿ ಅಲ್ಲಿಯೇ ನೆಲಸಿರಬೇಕೆಂದೂ, ಸಾರ್ವಜನಿಕ ಭಾಷಣಗಳನ್ನಾಗಲಿ, ಅಥವಾ ಪತ್ರಿಕೆಗಳ ಮುಖೇನ ಹೇಳಿಕೆಗಳನ್ನಾಗಲೀ ಕೊಡಕೂಡದೆಂದೂ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಹೊರಡಿಸಿರುವ ಆಜ್ಞೆಯನ್ನು ಈ ಪ್ರತಿಕಾಲ ಶ್ರೀ ತಿಮ್ಮಾರೆಡ್ಡಿಗಳ ಮೇಲೆ ಜಾರಿ ಮಾಡಲಾಯಿತೆಂದು ಗೊತ್ತಾಗಿದೆ.

ಶ್ರೀ ತಿಮ್ಮಾರೆಡ್ಡಿಯವರು ಅದನ್ನಂಗೀಕರಿಸದೆ ಆ ಆಜ್ಞೆಯು ಅನ್ಯಾಯವಾದುದೆಂದು ತಿಳಿಸಿ ಅದರ ಮೇಲೆಯೇ ಬರೆದು ಹಿಂದಕ್ಕೆ ಕೊಟ್ಟರೆಂದೂ ಹೇಳಲಾಗಿದೆ.

ಶ್ರೀ ತಿಮ್ಮಾರೆಡ್ಡಿಯವರಿಗೆ ಅವರ ಊರಿಗೆ ಹೋಗಲು ೨ ದಿನ ಅವಕಾಶವನ್ನು ಕೊಡಲಾಗಿದೆಯೆಂದೂ, ಅವರ ಮೇಲಿನ ಪ್ರತಿಬಂಧಕಾಜ್ಞೆಯು ೬ ತಿಂಗಳು ಕಾಲ ಜಾರಿಯಲ್ಲಿರುವುದೆಂದೂ ಗೊತ್ತಾಗಿದೆ.

The Tainadu · 16.8.45

The "Tainadu" publishes the report that Mr. N. C. Thimma Reddy refused to receive the internment order served on him by the police authorities / Submitted

3 2

Submitted

The "Tamavani" The Jainadu, The Deshabandhu The Vishwabanataka' and the Sadhi have written editorials criticising the detainment order against Mr. N. G. Thimma Reddy and urging the withdrawal of the above-mentioned order along with other prohibitory orders while in force in the State, in view of similar action likely to be taken outside the State.

1) The Deshabandhu deplores the issue of the detainment order against Mr. Thimma Reddy and appeals to Government to display magnanimity and withdraw all the prohibitory orders on the state capers in view of the establishment of peace in the world.

(2) The "Tamavani" says that the issue of this order is as thoughtless as it is unjustified and regrets that the Government are adopting this provocative attitude towards the public. It adds that Mr. Thimma Reddy has only acted as a

P.T.O.

Self-respecting citizen in refusing to receive the order. and trusts that the Government will withdraw this and other prohibitory orders now in force in the State.

3) The Jainadu, deplores the issue of the internment order and says that the issue of such orders is not in keeping with the times. It adds that no loyal object of Mysore need be served with such an order and trusts that the Government will withdraw the abovementioned order immediately.

4) The Viswakarnataka, Condemns the issue of the internment order against Mr. Thimmareddy and says that it would be better if the Government issue an order asking the people to stop all their political activities once and for all. However, it appeals to the people not to get excited over the issue but to make the Government realise, by means of peaceful methods, that the order is unjust.

5) The Sadhi expresses its painful surprise

at the issue of the imprisonment order against Mr. Thimma Reddy, and points out that every person should be punished only after his guilt is proved in a Court of Law. The offence committed by Mr. Thimma Reddy is not known but no offence committed by persons like Mr. Reddy can in any manner disturb the peaceful atmosphere established in the country by the termination of the War. We request the Government to withdraw the order immediately.

Yours faithfully,

Mr K. T. Bhashyam has issued a statement criticising what he calls the intolerant attitude of Government in regard to public criticism of their actions. Mr. Thimma Reddy has given expression to what is really the public opinion in the State. It is strange that at a time when Victory is being celebrated, when the Defence Ordinances are being withdrawn in other countries, the liberties of the people in the State should be checked.

Messrs Manjappa, Chenniah and Shiva have jointly stated that arbitrary orders of this kind serve only to embitter the attitude of the people. Sd/- for personal Secy.

ಅಮೃತವಾಣಿ

ಸ್ವಾತಂತ್ರ್ಯವು ಒಬ್ಬರಿಂದ ಇನ್ನೊಬ್ಬರಿಗೆ ಧಾರೆಯೆರೆಯಲ್ಪಡುವುದಿಲ್ಲ. ಅದನ್ನು ಸ್ವಸಾಮರ್ಥ್ಯದಿಂದ ಪಡೆಯಬೇಕು. ಭಿಕ್ಷೆ ಮಾಡಿದರೆ ಸಿಗದು.

ದೇಶಬಂಧು

ಪಾರ್ಥಿವ ಸಂವತ್ಸರದ ಶ್ರಾವಣ ಶುದ್ಧ ೧೨

೨೦-೮-೪೫ನೇ ಸೋಮವಾರ

ಶ್ರೀ ತಿಮ್ಮಾರೆಡ್ಡಿಯವರ ಮೇಲೆ ಪ್ರತಿಬಂಧಕಾಜ್ಞೆ

ಸಂಗ್ರಾಮವು ನಿಂತುಹೋಗಿ, ಭಾರತ ರಕ್ಷಣೆ ಶಾಸನಗಳೇ ಆದಿಯಾಗಿ, ಪರರ ಹಕ್ಕು ಬಾಧ್ಯತೆಗಳನ್ನು ಮೊಟಕುಮಾಡುವ ಎಲ್ಲ ಬಗೆಯ ಆಜ್ಞೆಗಳನ್ನೂ ಹಿಂದಕ್ಕೆ ತೆಗೆದುಕೊಂಡು, ದೇಶದಲ್ಲಿ ಶಾಂತಿಯುತವಾದ ವಾತಾವರಣವನ್ನುಂಟು ಮಾಡಿಕೊಡುವ ಪರಿಸ್ಥಿತಿ ಸನ್ನಿಹಿತವಾಗಿರುವಾಗ, ಮೈಸೂರು ಸರ್ಕಾರದವರು, 'ಡಿಟೆನ್ಷನ್ ಅಂಡ್ ರೆಸ್ಟ್ರಿಕ್ಷನ್' ಶಾಸನದಪ್ರಕಾರ ಶ್ರೀ ಎನ್. ಸಿ. ತಿಮ್ಮಾರೆಡ್ಡಿಯವರಮೇಲೆ ಆಜ್ಞೆಯೊಂದನ್ನು ಪ್ರಯೋಗಿಸಿ ಅವರು ಬೆಂಗಳೂರು ನಗರವನ್ನು ಬಿಟ್ಟು ತಮ್ಮ ಸ್ವಗ್ರಾಮವಾದ ಕಾಗಸಂದ್ರದಲ್ಲಿ ಹೋಗಿ ನೆಲಸಬೇಕೆಂದೂ ಆರುತಿಂಗಳಕಾಲ ಭಾಷಣಾದಿಗಳನ್ನು ಮಾಡಕೂಡದೆಂದೂ, ಪತ್ರಿಕೆಗಳಿಗೆ ಹೇಳಿಕೆಗಳನ್ನು ಕೊಡಕೂಡದೆಂದೂ ವಿಧಾಯಕ ಮಾಡಿರುವುದು ಅನೇಕರಿಗೆ ಆಶ್ಚರ್ಯವನ್ನೂ ವಿಷಾದವನ್ನೂ ಉಂಟುಮಾಡುವುದು ಸ್ವಾಭಾವಿಕವಾದುದು. ಶ್ರೀ ತಿಮ್ಮಾರೆಡ್ಡಿಯವರಮೇಲೆ ಪ್ರಯೋಗಿಸಲ್ಪಟ್ಟಿರುವ ಆಜ್ಞೆಯು ಕಾಂಗ್ರೆಸ್ಸಿನ ವಿಚಾರದಲ್ಲಿ ಸರ್ಕಾರದವರು ಅನುಸರಿಸುತ್ತಿರುವ ಧೋರಣೆಯ ಸಂಕೇತವೆನಿಸಿದೆಯೆಂದು ಸಹ ಅನೇಕರು ಭಾವಿಸಲು ಕಾರಣವಾಗಿದೆ. ಆದರೆ, ಈ ಆಜ್ಞೆಯ ಹಿನ್ನೆಲೆಯನ್ನು ಗಮನದಲ್ಲಿರಿಸಿ ವಿಮರ್ಶಿಸುವುದಾದರೆ ಈ ಆಜ್ಞೆಗೂ ಸರ್ಕಾರದವರು ಕಾಂಗ್ರೆಸ್ಸಿನ ವಿಚಾರದಲ್ಲಿ ಅನುಸರಿಸುತ್ತಿರುವ ನೀತಿಗೂ ಗಂಟು ಹಾಕುವುದು ಸರಿಯಲ್ಲವೆಂಬುದೂ ಶ್ರೀ ತಿಮ್ಮಾರೆಡ್ಡಿಯವರ ಮೇಲೆ ಪ್ರಯೋಗಿಸಲ್ಪಟ್ಟಿರುವ ಆಜ್ಞೆಯು ಕೇವಲ ವೈಯಕ್ತಿಕವಾದ ಪ್ರಸಂಗವೆಂಬುದೂ ಸ್ಪಷ್ಟಪಡುವುದು. ಶ್ರೀ ಎಸ್. ಜಿ. ರಂಗರವರು ಬೆಂಗಳೂರಿಗೆ ಬಂದಿದ್ದಾಗ ವಿದ್ಯಾರ್ಥಿ ಕಾಂಗ್ರೆಸ್ ಸಭೆಯಲ್ಲಿ ಶ್ರೀ ತಿಮ್ಮಾರೆಡ್ಡಿಯವರು ಮಾಡಿದ ಭಾಷಣ ಅವರು ಮೈಸೂರು ಕಾಂಗ್ರೆಸ್ಸಿನ ಪ್ರಕಟಣೆ ಕಾರ್ಯಾದಿಗಳ ಪತ್ರಿಕೆಗಳಲ್ಲಿ ಪ್ರಕಟಣೆಗಾಗಿ ಕಳುಹಿಸಿಕೊಟ್ಟ ಕೆಲವು ಪ್ರಕಟಣೆಗಳ ಧೋರಣೆ ಇವುಗಳು ಕೂಂಚವಾದರೂ ಉದ್ರೇಕಗೊಳಿಸುವಂತಹವುಗಳೆಂದೇ ಹೇಳಬಹುದು. ಆದರೆ; ಅವುಗಳನ್ನು ದೊಡ್ಡದನ್ನಾಗಿ ಮಾಡಿ ಸರ್ಕಾರದವರು ಈ ಆಜ್ಞೆಯನ್ನು ಹೊರಡಿಸಬಾರದಾಗಿತ್ತು. ಇಂದಿನ ಪರಿಸ್ಥಿತಿಯಲ್ಲಿ ಆ ಪ್ರಸಂಗಗಳನ್ನು ಸರ್ಕಾರದವರು ಉಪೇಕ್ಷೆಮಾಡಿದ್ದರೆ ಅಂತಹ ಪ್ರಮಾದ ಘಟನೆಗಳೇನೂ ಸಂಭವಿಸುತ್ತಿರಲಿಲ್ಲವೆಂಬುದೇ ನಮ್ಮ ಅಭಿಪ್ರಾಯವಾಗಿದೆ

ಮೈಸೂರು ಕಾಂಗ್ರೆಸ್ ನಾಯಕರೂ ಸದಸ್ಯರೂ ಶಿಸ್ತಿನಿಂದ ಸಂಯಮದಿಂದ ವರ್ತಿಸಬೇಕು. ಶ್ರದ್ಧಾಶಕ್ತಿಗಳಿಂದ ಕೂಡಿ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದಿರುವ ಅವರು ಶಿಸ್ತು ಮತ್ತು ಸಂಯಮದಿಂದ ಕೂಡಿರಬೇಕಾದುದು ಅಗತ್ಯವಾದುದು. ದೇಶದ ಇಂದಿನ ಪರಿಸ್ಥಿತಿಯಲ್ಲಿ ಉದ್ರೇಕ ಪೂರಿತವಾದ ಭಾಷಣಗಳನ್ನು ಮಾಡಲು ಅವಕಾಶಕೊಡಬಾರದು. ಮುಂದೆ ದೇಶದಲ್ಲಿ ಉಂಟಾಗುವ ಮಹತ್ತ್ವಂವಾದ ಬದಲಾವಣೆಗಳ ಕಾಲದಲ್ಲಿ ಶಿಸ್ತಿನಿಂದ, ಸಂಯಮದಿಂದ, ವರ್ತಿಸಿ ಗುರುತರವಾದ ಜವಾಬ್ದಾರಿಗಳನ್ನು ಹೊರಲು ತಕ್ಕ ಅರ್ಹತೆಗಳನ್ನು ಸಂಪಾದಿಸಿಕೊಳ್ಳಬೇಕು. ಮಹಾತ್ಮರು ಕಾಂಗ್ರೆಸ್ ಅಧ್ಯಕ್ಷರ ಮೂಲಕ ಸೂಚಿಸಿರುವಂತೆ, ರಚನಾತ್ಮಕ ಕಾರ್ಯಗಳ ಕಡೆಗೆ ತಮ್ಮ ಗಮನವನ್ನು ಹೊರಳಿಸಬೇಕು.

ಶಾಂತಿಯುತವಾದ ವಾತಾವರಣವು ನೆಲಸುತ್ತಿರುವ ಈ ಸಂದರ್ಭದಲ್ಲಿ ಸರ್ಕಾರದವರು ಕೂಡ ಔದಾರ್ಯವನ್ನು ವ್ಯಕ್ತಪಡಿಸಿ, ಕಾಂಗ್ರೆಸ್ಸಿನ ಮೇಲಿರುವ ಪ್ರತಿಬಂಧಕಾಜ್ಞೆಗಳನ್ನೆಲ್ಲಾ ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ನಾವು ಪ್ರಾರ್ಥಿಸುತ್ತೇವೆ. ಬ್ರಿಟಿಷ್ ಭಾರತದಲ್ಲಿ ಕಾಂಗ್ರೆಸ್ಸಿನ ಅಂಗಸಂಸ್ಥೆಗಳ ಮೇಲೆ ಇದ್ದ ಪ್ರತಿಬಂಧಕಾಜ್ಞೆಗಳನ್ನೆಲ್ಲಾ ಹಿಂದಕ್ಕೆ ತೆಗೆದುಕೊಳ್ಳುತ್ತಿರುವುದಕ್ಕೆ ಮೈಸೂರು ಸರ್ಕಾರದವರು ಗಮನಿಸದೆ ಇಲ್ಲ ಬ್ರಿಟಿಷ್ ಭಾರತದ ಪ್ರಭಾವವು ಕೂಡ ಮೈಸೂರಿನ ಮೇಲೆ ಪರೋಕ್ಷವಾಗಿಯಾದರೂ ಬೀರುವುದೆಂಬುದನ್ನೂ ಅವರು ಅರಿಯದೆ ಇಲ್ಲ ಸರ್ಕಾರದವರು ಬೇಗನೆ ಎಲ್ಲಬಗೆಯ ಪ್ರತಿಬಂಧಕಾಜ್ಞೆಗಳನ್ನೂ ಹಿಂದಕ್ಕೆ ತೆಗೆದುಕೊಂಡು ಮೈಸೂರಿನ ಎಲ್ಲ ಪ್ರಜೆಗಳ ಕೃತಜ್ಞತೆಗಳನ್ನು ಗಳಿಸಿಕೊಳ್ಳಬೇಕೆಂಬುದೇ ನಮ್ಮ ಪ್ರಾರ್ಥನೆ.

ಜನವಾಣಿ
ಶನಿವಾರ ೧೮ನೇ ಆಗಸ್ಟ್ ೧೯೪೫

ಅರ್ಥವಿಲ್ಲದ ಆಜ್ಞೆ

ಕಾಂಗ್ರೆಸ್ ಸಂಸ್ಥೆಯ ಪ್ರಕಟಣಾಧಿಕಾರಿಗಳಾದ ಶ್ರೀ ನಾಗಸಂದ್ರ ಸಿ, ತಿಮ್ಮಾರೆಡ್ಡಿಯವರ ಮೇಲೆ ಸರ್ಕಾರದವರು ಜಾರಿ ಮಾಡಿರುವ ಆಜ್ಞೆ ವಿಚಿತ್ರವಾಗಿದೆ. ಅವರು ನಾಗಸಂದ್ರ ಗ್ರಾಮವನ್ನು ಬಿಟ್ಟು ಹೊರಗೆಲ್ಲೂ ಬರಬಾರದು; ಅವರು ಪತ್ರಿಕೆಗಳಿಗೆ ಪ್ರಕಟಣೆಯನ್ನು ಕಳಿಸಬಾರದು; ಅಷ್ಟೇ ಅಲ್ಲ, ಸರ್ಕಾರಿ ಆಜ್ಞೆಯಲ್ಲಿ ಅವರು "Semi-Speech"ಗಳನ್ನು ಮಾಡಬಾರದೆಂದೂ ನಮೂದಿತವಾಗಿದೆ

ಈ "ಸೆಮಿ-ಸ್ಪೀಚ್" ಎಂಬ ಪದ ಇಂಥ ಆಜ್ಞೆಗಳಲ್ಲಿ ಪ್ರಯೋಗಿಸಲ್ಪಟ್ಟಿರುವುದು ಇದೇ ಮೊದಲು. ಇದಕ್ಕೆ ಸರ್ಕಾರದವರು ಏನು ಅರ್ಥವಿವರಣೆ ಮಾಡುತ್ತಾರೋ ಅದನ್ನು ಊಹಿಸಲಿಕ್ಕೂ ಸಹ ಅಸಾಧ್ಯವಾಗಿದೆ. ಶ್ರೀ ತಿಮ್ಮಾರೆಡ್ಡಿಯವರು ತಮ್ಮ ಮಿತ್ರರೊಡನೆ ಲೋಕಾಭಿರಾಮವಾಗಿ ಮಾತನಾಡುತ್ತಾ ಒಂದು ನಿಮಿಷ ಏನಾದರೂ ವಿವರಣೆ ಇತ್ತರೆ ಅದೂ ಅಪರಾಧವಾಗುತ್ತದೆಂದು ಈ ಪದಪ್ರಯೋಗ ಸೂಚಿಸುತ್ತದೆ. ಸರ್ಕಾರದವರು ಹೀಗೆ ಮಾಡುವ ಬದಲು ಶ್ರೀ ತಿಮ್ಮಾರೆಡ್ಡಿಯವರನ್ನು ದಸ್ತಗಿರಿ ಮಾಡಿ ನಿರ್ಬಂಧದಲ್ಲಿ ಇಡಬಹುದಾಗಿತ್ತು. ಒಂದು ರೀತ್ಯಾ ಅದು ಗೌರವದ ನಡವಳಿಕೆ ಆಗುತ್ತಿತ್ತು.

ಸರ್ಕಾರದವರು ಈ ಆಜ್ಞೆಯನ್ನು ಯಾವ ಕಾನೂನಿನ ಅಧಿಕಾರವನ್ನು ಚಲಾಯಿಸಿ ಜಾರಿ ಮಾಡಿದ್ದಾರೆಂಬುದು ಸ್ಪಷ್ಟವಾಗಿಲ್ಲ. ಡಿಫೆನ್ಸ್ ಆಫ್ ಇಂಡಿಯಾ ಶಾಸನದ ಅಧಿಕಾರದಮೇಲೆ ಎಂದು ಹೇಳುವುದಾದರೆ, ಇನ್ನೆಲ್ಲಿಂದ ಬಂತು ಡಿಫೆನ್ಸ್ ಆಫ್ ಇಂಡಿಯಾ ಮಾತು, ಎನ್ನಬೇಕಾಗುತ್ತದೆ. ಯುದ್ಧ ಮುಗಿದು ಆಗಲೇ ೩ ದಿನಗಳಾದವು ಭಾರತದ ರಕ್ಷಣೆಗೆ ಶ್ರೀ ತಿಮ್ಮಾರೆಡ್ಡಿಯವರಂಥವರ ಭಾಷಣಾದಿಗಳಿಂದ ಲೋಪ ಬರುವ ಸಂಭವದ ಮಾತೇ ಇಲ್ಲ. ಸಂಸ್ಥಾನದಲ್ಲಿ ಜಾರಿಯಲ್ಲಿರುವ ಪಬ್ಲಿಕ್ ಸೇಫ್ಟಿ ಆಕ್ಟಿನಪ್ರಕಾರ ಈ ಆಜ್ಞೆ ಜಾರಿಮಾಡಲ್ಪಟ್ಟಿರುವುದಾದರೆ, ಅಪವಿವೇಚನಾ ರಹಿತವಾದದ್ದೆಂದು ಹೇಳಲಿಕ್ಕೆ ವಿಧಿಯಿಲ್ಲ. ಸಾರ್ವಜನಿಕ ನೆಮ್ಮದಿಗೆ ಭಂಗಬರುವಂತೆ ಶ್ರೀಯುತರು ನಡೆದುಕೊಂಡಿದ್ದಾರೆಂದು ಸಂದೇಹಿಸಲಾವಕಾರಣವೂ ಇಲ್ಲ. ಸಾರ್ವಜನಿಕ ನೆಮ್ಮದಿಯ ರಕ್ಷಣೆಗಾಗಿ, ಸಾರ್ವಜನಿಕ ಹಿತಸಾಧನೆಗಾಗಿ ಅವರು ಹತ್ತಾರು ಅಂಕಿ ಅಂಶಗಳನ್ನು ಸಂಗ್ರಹಿಸಿ ಅವನ್ನು ಸರ್ಕಾರದ ಗಮನಕ್ಕೆ ತಂದು ಕುಂದುಕೊರತೆಗಳನ್ನು ಪರಿಹರಿಸಿ ಕೊಡಬೇಕೆಂಬ ಒಳ್ಳೆಯ ಉದ್ದಿಶ್ಯವನ್ನು ಶ್ರೀಯುತರು ಇಟ್ಟುಕೊಂಡಿದ್ದಾರೆ. ಶ್ರೀಯುತರ ಈ ಕಾರ್ಯಕ್ರಮವನ್ನು ಸರ್ಕಾರದವರು ತುಂಬಾ ಸಹಾಯವಾಗುವುದಾಗಿ ಭಾವಿಸಿ ಸ್ವಾಗತಿಸಬೇಕಾಗಿದ್ದುದು ಅವರ ಕರ್ತವ್ಯ ಆದರೆ ಅದಕ್ಕೆ ಸರ್ಕಾರದಿಂದ ದೊರೆತಿರುವ ಪುರಸ್ಕಾರವೇನು? ಆಶ್ಚರ್ಯದಿಗ್ಬಂಧನ! ಆದೂ ವಿಜಯೋತ್ಸವದ ದಿನ!

ಸರ್ಕಾರದವರು ಈಚಿಗೇಕೋ ಸಾರ್ವಜನಿಕರನ್ನು ಸಿಟ್ಟುಗೆಬ್ಬಿಸುವ ನಡವಳಿಕೆಗಳನ್ನೇ ಕೈಗೊಳ್ಳುತ್ತಿರುವುದನ್ನು ನೋಡಿದರೆ, ತುಂಬಾ ವಿಷಾದವಾಗುತ್ತದೆ. ಯುದ್ಧ ನಿಂತಿರಲಾಗಿ, ಸಾರ್ವಜನಿಕ ಆಸೆ ಆಕಾಂಕ್ಷೆಗಳನ್ನು ಈಡೇರಿಸಲೂ, ಮೈಸೂರಿನ ಭವಿಷ್ಯವನ್ನು ಭದ್ರವಾದ ತಳಹದಿಯಮೇಲೆ ನಿಲ್ಲಿಸುವ ಪುನರ್ರಚನಾ ಕಾರ್ಯವನ್ನು ಸಾರ್ವಜನಿಕ ಪ್ರಮುಖರ ಸಹಾಯ ಸಹಕಾರ ಪಡೆದು ಆರಂಭಿಸಲೂ ಸರ್ಕಾರದವರು ಪ್ರಯತ್ನಿಸುತ್ತಾರೆಂದು ಸಾರ್ವಜನಿಕರು ನಿರೀಕ್ಷಿಸಿದ್ದರೆ, ಆ ನಿರೀಕ್ಷೆಗಳೆಲ್ಲ ಅಸಾಧ್ಯವಾದದ್ದೆಂದು ಹೇಳುವ ಕಾರ್ಯಕ್ರಮವನ್ನೇ ಸರ್ಕಾರದವರು ಕಾಲದೇಶವರ್ತಮಾನಗಳ ಅರಿವಿಲ್ಲದೆ ಕೈಗೊಳ್ಳುವುದು ಸರ್ವಥಾ ಉಚಿತವಾಗಲಾರದು.

ಶ್ರೀ ತಿಮ್ಮಾರೆಡ್ಡಿಯವರು ಆ ಆಜ್ಞೆಯನ್ನು ಸ್ವೀಕರಿಸಲು ನಿರಾಕರಿಸಿದ್ದಾರೆ. ಗೌರವಾನ್ವಿತ ನಾದ ಪ್ರಜೆಯಂತೆ ವರ್ತಿಸಿದ್ದಾರೆ. ಸರ್ಕಾರದವರು ಈಗಲಾದರೂ ತಮ್ಮ ತಪ್ಪನ್ನು ತಿಳಿದುಕೊಂಡು ಆ ಆಜ್ಞೆಯನ್ನು ರದ್ದುಗೊಳಿಸುವುದರ ಜತೆಗೆ, ದೇಶದಲ್ಲಿರುವ ಸಮಸ್ತ ವಿಧವಾದ ಪ್ರತಿಬಂಧಕಾಜ್ಞೆಗಳನ್ನೂ ವಾಪಸು ತೆಗೆದುಕೊಳ್ಳುತ್ತಾರೆಂದು ಸಾರ್ವಜನಿಕರು ನಿರೀಕ್ಷಿಸಿದ್ದಾರೆ.

The Janavani
18.8.45

ವಿಶ್ವಕರ್ನಾಟಕ

ಸಂಪುಟ ೨೦-೮-೧೯೪೫

ಶ್ರೀ ತಿಮ್ಮಾರೆಡ್ಡಿಯವರ ದಸ್ತಗಿರಿ

೧೬ನೇ ತಾರೀಖು ಮೈಸೂರು ಸರ
ರದ ಅಜ್ಞಾ ವಿತ್ಯ ಮೈಸೂರು ಕಾಂಗ್ರೆಸ್
ಪ್ರಚಾರ ಸಂಚಾಲಕರಾದ ಶ್ರೀ ಎನ್
ತಿಮ್ಮಾರೆಡ್ಡಿಯವರ ಮೇಲೆ ಪೋಲೀಸ್ ಆ
ಕ್ಷರು ನೀವು ಇಲ ಗಟಿಗಳಿಗಾಗಿ
ಬೆಂಗಳೂರನ್ನು ಬಿಡಿ, ತಾಗಸಂದ್ರದಲ್ಲಿ ನೆಲೆ
ಪತ್ರಿಕೆಗಳಿಗೆ ಹೇಳಿಕೆಗಳನ್ನು ಕೊಡಬೇಡಿ ಎ
ದು ಆಜ್ಞೆ ಜಾರಿ ಮಾಡಿದರು. ೧೬ನೇ ತಾ
ರೀಖಿನ ವಿಶ್ವಾದ್ಯಂತವೂ ವಿಶ್ವ ಮಹಾ ವಿಜಯ
ವಿಜಯ ಮಹೋತ್ಸವ ಇಂತಹ ವಿಜಯ ವಿ
ದಲ್ಲಿ ಮೈಸೂರು ಸರ್ಕಾರದ ವ
ಮೈಸೂರಿನ ರಾಜಭಕ್ತ ಪ್ರಜೆಗಳಿಗೆ ಇಷ್ಟು ಮ
ಗಳ ಕಳಿಸಿದ್ದು!

ಮೈಸೂರು ಸರ್ಕಾರದ ಈ ವಿಚಿತ್ರ ನೀತಿಯ
ನ್ನು ಕಂಡು ಮೈಸೂರಿನ ಪ್ರಜೆಗಳು ಎಷ್ಟ
ಹೊಂದಿಬಹುದೋ ಹೇಳಲಸದಳವಾಗಿದೆ
ಜಾಪ್ರಭುತ್ವದ ಈ ಸ್ವರ್ಣ ಯುಗದಲ್ಲಿ, ಇಂ
ಹ ಸದಸೆಯಲ್ಲಿ ಮೈಸೂರು ಸರ್ಕಾರದ ಅಪ್ರ
ಸಂಗಿಕ ವಿಸಂಗತ ನೀತಿ ನೋಡಿ ನಾವು ಮರ
ಗದೇಕಾಗಿದೆ ಶ್ರೀ ತಿಮ್ಮಾರೆಡ್ಡಿಯವರ
ಮೈಸೂರಿಗೆ ಮಾಡಿದ ಮಹಾ ಪರಾ
ವಾತ್ಮಕ ಕಾಲಚಕ್ರ ಪ್ರವರ್ತಂದೆ ನೆಗ್ಗುತ್ತಿ
ಮೈಸೂರು ಕೂಡ ಈ ಕಾಲಧರ್ಮವನ್ನು ಅ
ಲಂಭಿಸಿ ಪ್ರಜಾಪ್ರಭುತ್ವವನ್ನು ಮೈಸೂರಿ
ಪ್ರಜೆಗಳಿಗೆ ದಯ ಪಾಲಿಸಲಿ ಎಂದು ಪ್ರಾರ್ಥ
ಮಾಡಿದ್ದು ಒಂದ ಅಪಚಾರವೆಂದು ಪ್ರಭು
ತ ದೆವರು ಪರಿಗಣಿಸಿರುವರೇ?

ಶ್ರೀ ತಿಮ್ಮಾರೆಡ್ಡಿಯವರು ಇದು ನನ್ನ ಅಜ್ಞಾ
ರವಕ್ಕೆ ಸಲ್ಲದು ಈ ಆಜ್ಞೆಯು ಅನ್ಯಾಯದ
ಜ್ಞೆಯೆಂದುದರಿಂದ ನಾನು ನಿರಾಕರಿಸುತ್ತೇನೆ
ಎಂದು ಉತ್ತರವಿತ್ತು ಕಳುಹಿಸಿದರು ತದನಂ
ತರ ಪೋಲೀಸಿನವರು ಬಂದು ಶ್ರೀ ತಿಮ್ಮಾರೆಡ್ಡಿ
ಯವರನ್ನು ದಸ್ತಗಿರಿಮಾಡಿ ಬೆಂಗಳೂರಿನಿಂದಾ
ಚೆ ಒಂದೆರಡು ಶ್ರೀ ತಿಮ್ಮಾರೆಡ್ಡಿಯವರಿಗೆ ಅಗಿರಬಹು
ದಾದ ಸಣ್ಣಪುಟ್ಟ ಕಷ್ಟಗಳಿಗೆ ಅವರಾಗಲೀ ನಾವಾ
ಗಲೀ ಲಕ್ಷಿಸಿಪಿಸುವವರಲ್ಲ ಗಾಂಧಿ ಸತ್ಯಾಗ್ರಹಿ
ನಾಸ ಎಂಬುದಾಗಿ ಅವರೇ ನಮ್ಮ ಪ್ರತಿನಿಧಿಗೆ
ಫೋನಿನಲ್ಲಿ ಇತ್ತಾಗ ತಿಳಿಸಿದರು ಶ್ರೀ ರೆಡ್ಡಿಯವರ ಈ
ತ್ಯಾಗ ವಿಶೇಷಕ್ಕಾಗಿ ನಮ್ಮ ಅಭಿನಂದನೆ

ಜಗತ್ತಿನಲ್ಲಿ ಆಗುತ್ತಿರುವ ಮಹಾ ಬದಲಾವ
ಣೆಗಳು ಮೈಸೂರು ಸರ್ಕಾರದ ಮೇಲೂ ಪರಿ
ಣಾಮಕಾರಿಯಾಗಿ ಮೈಸೂರು ದೇಶೀಯ ಸಂ
ಸ್ಥಾನಗಳ ಆದರ್ಶತ್ವದಲ್ಲಿ ಅಗ್ರಸ್ಥಾನ ಪಡೆಯಲಿ
ಎಂದು ಹಂಬಲಿಸುತ್ತಿದ್ದ ನಮಗೆ ತುಂಬಾ ನಿರಾಶೆಯಾಗಿದೆ ನಿಷ್ಕ
ಷನಾಂಗ ಸಮೀಕ್ಷಣದಲ್ಲಿ ಮೈಸೂರು ಪ್ರಜೆ
ಗಳೂ ಪ್ರಜಾ ಸ್ವಾತಂತ್ರ್ಯದ ಮಂಗಳವನ್ನು
ಪಡೆಯಲಿ ಎಂದಾಶಿಸುತ್ತಿದ್ದ ನಮಗೆ, ಈ ಮ
ಹಾ ವಿಜಯದ ದಿನದಲ್ಲೇ ಮೈಸೂರು ಸರ್ಕಾರ
ಪಡೆದ ಈ ಧೋರಣೆಯಿಂದ ನಿರಾಶೆಯಾಗಿದೆ ಮೈ
ಸೂರು ದೇಶದಲ್ಲಿ ರಾಜಕೀಯ ಸ್ವಾತಂತ್ರ್ಯ ಕ್ಷೀ
ಣವಾಗಿರಲಾರದೆಂದು ಸರ್ಕಾರವೇನಾದರೂ ಪಣ
ತೊಟ್ಟಿದೆಯೆ? ಆದರಲ್ಲೂ ಭಾ-ರ-ಶಾ ದ ಹೆಸರಿನಲ್ಲಿ
ನಿಮ್ಮನ್ನು ಬಂಧಿಸಿದೆವೆಂದು ತಿಳಿಸಿರುವುದು
ಕೇವಲ ಹಾಸ್ಯಾಸ್ಪದ

ಶಾಂತಯುತವಾಗಿ ರಾಜಕೀಯ ಚಟುವಟಿಕೆ
ಗಳನ್ನು ಮುಂದುವರಿಸುತ್ತಿರುವ ಮೈಸೂರು
ಕಾಂಗ್ರೆಸ್ಸಿನ ಮೇಲೆ ಸರಕಾರದ ಈ ಗಧಾಪ್ರಹಾ
ರವು ಸಲ್ಲದು ಸರ್ಕಾರದ ಆಜ್ಞೆಯು ಕೇವಲ
ಖಂಡನೀಯ ಸರಕಾರವು ಇಂತಹ ಆಜ್ಞೆಗಳನ್ನು
ಪ್ರಜೆಗಳ ಮೇಲೆ ಪ್ರಯೋಗಿಸುವುದರ ಬದಲು
ಪ್ರಜೆಗಳಿಗೆ ಒಂದೇ ಬಾರಿ ಎಚ್ಚರಿಕೆ ಕೊಟ್ಟು
ನಿಮ್ಮ ರಾಜಕೀಯ ಕಾರ್ಯಕ್ರಮವನ್ನೆಲ್ಲ ಕೊನೆ
ಗೊಳಿಸಿ ಎಂದು ತಿಳಿಸಿಬಿಡುವುದು ಎಷ್ಟೋ
ಲೇಸು.

ಪ್ರಜೆಗಳಿಗೂ ನಮ್ಮನಾತು ಸ್ವಾಸ್ಥ್ಯ ಇದ
ರಿಂದ ಉದ್ರೇಕಕೊಳ್ಳಬೇಡಿ. ಮೈಸೂರಿಗೂ
ಮಂಗಳ ದಿನಗಳು ಒರದೆ ಹೋಗಲಾರವು.
ಸರ್ಕಾರಕ್ಕೆ ಆಜ್ಞೆಯು ಅನ್ಯಾಯವೆಂಬುದನ್ನು
ಶಾಂತಯುತವಾಗಿ ತೋರಿಸಿಕೊಡಿ

ಮೈಸೂರಿನ ರಾಜಕೀಯ ಪಕ್ಷಗಳಿಗೂ
ನಮ್ಮ ಬಿನ್ನಹವಿಷ್ಟೇ ಇದು ನಾಗರೀಕ ಹಕ್ಕು
ಭಾದ್ಯತೆಗಳಿಗೆ ಸಂಬಂಧಿಸಿದ್ದು.

ಈ ಸ್ವಾತಂತ್ರ್ಯವನ್ನು ಕಾಯುವುದರಲ್ಲಿ ನಿಮ್ಮ
ರಾಜಕೀಯವ್ಯೂಹವೂ ಅಭೇದ್ಯವಾಗಿರಲಿ ನಿ
ರ್ಭಯವಾಗಿರಲಿ.

The Vishwakarnataka
20-8-45

52 41

ಸಾಧ್ವಿ
ತಾ|| ೧೭-೮-೪೫ ಶುಕ್ರವಾರ

The Sadhvi
17.8.45

ವಿಜಯ ಕಾಲದಲ್ಲೂ ದಿಗ್ಬಂಧನಗಳೇ ?

ಪ್ರಪಂಚವೆಲ್ಲಾ ವಿಜಯೋತ್ಸವವನ್ನು ಆಚರಿಸುತ್ತಿದೆ. ಎಲ್ಲೆಲ್ಲೂ ಆನಂದವು ತುಂಬಿ ತುಳುಕಾಡುತ್ತಿದೆ'. 'ಬಂಧನಗಳೆಲ್ಲವೂ ತೊಲಗುತ್ತಿವೆ. ಯುದ್ಧ ಖೈದಿಗಳು ಕೂಡ ವಿನೋಜನೆ ಹೊಂದಲಿರುವರು. ಎಲ್ಲಾ ಪ್ರತಿಬಂಧಕ ಶಾಸನ ಶೃಂಖಲೆಗಳೂ ನಿರ್ನಾಮವಾಗುವಂತಹ ಕಾಲ ಬಂದಿದೆ.

ಇಂತಹ ಸಮಯದಲ್ಲಿ ನಮ್ಮ ಮೈಸೂರು ಸರ್ಕಾರದವರು ಶ್ರೀ ಎ.ಸಿ. ತಿಮ್ಮಾರೆಡ್ಡಿಯವರ ಮೇಲೆ ಹಾಕಿರುವ ದಿಗ್ಬಂಧನಾಜ್ಞೆಯು ಎಲ್ಲರಿಗೂ ಪರಮಾಶ್ಚರ್ಯವನ್ನುಂಟುಮಾಡಿದೆ. ಶ್ರೀ ರೆಡ್ಡಿಯವರು ತಮ್ಮ ಗ್ರಾಮವಾದ ನಾಗಸಂದ್ರವನ್ನು ಬಿಟ್ಟು ಹೊರಗೆ ಬರಕೂಡದು ; ಭಾಷಣಗಳನ್ನು ಮಾಡಕೂಡದು ಪತ್ರಿಕೆಗಳಿಗೆ ಲೇಖನಗಳನ್ನು ಕೊಡಕೂಡದು—ಎಂಬುದಾಗಿ ಅವರಿಗೆ ತಿಳಿಸಲಾಗಿದೆ. "ಈ ಅನ್ಯಾಯದ ಆಜ್ಞೆಯನ್ನು ಆಂಗೀಕರಿಸುವುದು ಆತ್ಮಗೌರವವುಳ್ಳ ಪ್ರಜೆಗೆ ಉಚಿತವಲ್ಲವಾದರಿಂದ ಅದನ್ನು ನಿರಾಕರಿಸಿರುವುದಾಗಿ" ಶ್ರೀ ರೆಡ್ಡಿಯವರು ಆಜ್ಞೆಯ ಮೇಲೆ ಬರೆದು ಕಳುಹಿಸಿದ್ದಾರೆ.

ಪ್ರಜೆಗಳ ಸಾಮಾನ್ಯ ಹಕ್ಕುಬಾಧ್ಯತೆಗಳಿಗೆ ಹೀಗೆ ಧಕ್ಕೆ ತರುವುದನ್ನು ಯಾರೂ ಒಪ್ಪುವುದಿಲ್ಲ. ಆದರಲ್ಲೂ ಇಂತಹ ಸಂತೋಷ ಸಮಯದಲ್ಲಿ ಇಂತಹ ಅಪ್ರಜ್ಞಾದಿಗ್ಬಂಧನಗಳು ಕೇವಲ ಅಪ್ರಕೃತ.

ಸಾರ್ವಜನಿಕರು ಅಪರಾಧ ಮಾಡುವ ಸಂಭವವೇ ಇಲ್ಲವೆಂದು ನಾವು ಹೇಳುವುದಿಲ್ಲ; ಆದರೆ ಅಪರಾಧವನ್ನು ಸರಿಯಾದ ನ್ಯಾಯಾಸ್ಥಾನದಲ್ಲಿ ರುಜುವಾತು ಮಾಡಿ ತಕ್ಕ ಶಿಕ್ಷೆ ಕೊಡಿಸುವುದು ಎಲ್ಲಾ ನಾಗರಿಕ ಸರ್ಕಾರಗಳ ಲಕ್ಷಣ. ಶ್ರೀ ರೆಡ್ಡಿಯವರ ಅಪರಾಧವೇನೆಂಬುದು ನಮಗೆ ಗೊತ್ತಿಲ್ಲ. ಅದು ಏನೇ ಇರಲಿ ; ಎಂತಹ ಘೋರವಾದುದೇ ಆಗಿರಲಿ : ನ್ಯಾಯವಿಮರ್ಶೆಯಿಂದ ಅದು ಬಾಹಿರವಾದುದಲ್ಲ. ಘೋರ ಯುದ್ಧವು ಮುಗಿದು ಈಗ ಸ್ಥಾಪಿತವಾಗಿರುವ ಶಾಂತಿ ವಾತಾವರಣವು ಶ್ರೀ ರೆಡ್ಡಿಯವರಂಥವರ ಯಾವ ಕೃತ್ಯಗಳಿಂದಲೂ ಕಲಕಲಾರದು.

ಇಡೀ ವಿಶ್ವವೇ ಸಂತೋಷದಲ್ಲಿ ಭಾಗಿಯಾಗಿರುವಾಗ ನಮ್ಮ ಸಂಸ್ಥಾನದಲ್ಲಿ ಇಂತಹ ಆಜ್ಞೆಗೆ ಅವಕಾಶ ಕೊಡದೆ ಇದನ್ನು ಕೂಡಲೇ ಸರ್ಕಾರದವರು ರದ್ದುಮಾಡಬೇಕೆಂದು ನಾವು ಕೋರುತ್ತೇವೆ.

The Sadhvi 17.8.45

53 1/7

The Rathnabhoomi
16.8.45

The 'Rathnabhoomi' publishes a statement issued by Mr. N. C. Thimma Reddy for the students of the State. Submitted

ರತ್ನ-ಭೂಮಿ

ಮಾತೃ ಭೂಮಿ

Reach the comman man and Serve him

Mr. Thimma Reddy's call to Students

Sjt. N. C. THIMMA REDDY, Member in charge of the Publicity and External affairs of the Mysore Congress, has issued an appeal to the students of the State :-

The war has ended; but the four freedoms as applied to our Mother Country has a remote chance of being fulfilled. The destiny of our country lies in our hands and it is to be shaped in light of the new experiences passed through the past six years of war. A silent revolution has passed through the minds of the people as displayed through the electors in England, and everywhere the regime of common man is being established. It is his needs that draw the supreme attention of the Governments and any Government that is indifferent to such needs is summarily dismissed and replaced by a common-man's Government.

It is pretty clear that the needs of the common people in our country can be met only by a government that is responsible to them. We are in the midst of a struggle for the establishment of such a government in Mysore as well as in British India. In short, the freedom of our country only be obtained through the will of the common man and who else is more fitted than the students to reach this common man in the remote villages of our country and to work for such a non-violent and silent revolution in his mind and out look? If the will to be free were to grow more universal and insistant, no power on earth can prevent us from attaining our freedom. It is a hard and strenuous work and the students must be prepared to meet all the difficulties and dangers ahead. Freedom is our birth-right and it is a glory to fight and, if necessary die for it.

"VANDE MATHARAM"

54

JANAVANI 18-8-45

ಶ್ರೀ ತಿಮ್ಮಾರೆಡ್ಡಿಯವರ ದಸ್ತಗಿರಿ

ದಸ್ತಗಿರಿಗೆ ಮುಂಚೆ ಶ್ರೀ ತಿಮ್ಮಾರೆಡ್ಡಿಗಳ ಹೇಳಿಕೆ

ಬೆಂಗಳೂರು ೧೭

ಈ ದಿವಸ ಶುಕ್ರವಾರ ೧೨ ಗಂಟೆ ಹೊತ್ತಿಗೆ ಬೆಂಗಳೂರಿನ ಸ್ಪೆಷಲ್ ಬ್ರಾಂಚ್ ಪೋಲೀಸ್ ಇನ್ಸ್‌ಪೆಕ್ಟರ್ ಆದ ಶ್ರೀಯುತ ಟಿ ಕೆ ನಾರಾಯಣಮೂರ್ತಿಯವರು ತಮ್ಮನ್ನು ಬಂಧಿಸಿಕೊಡಸಿ ಹೋಗಿ ಗಾಂಧೀ ನಗರದಲ್ಲಿ ವಾರ್ಡನ್ ಇಂಜಿನಿಯರ್ಸ್ ಕಂಚಿನ ಕಚೇರಿಯಲ್ಲಿ ಮೈಸೂರು ಕಾಂಗ್ರೆಸ್ ಪ್ರಕಟಣಾ ಪ್ರಾಧಿಕಾರಿಗಳಾದ ಶ್ರೀಯುತ ಎನ್ ಸಿ ತಿಮ್ಮಾರೆಡ್ಡಿಯವರನ್ನು ದಸ್ತಗಿರಿ ಮಾಡಿದರು.

ಮೊದಲು ಇನ್ಸ್‌ಪೆಕ್ಟರ್ ನಾರಾಯಣಮೂರ್ತಿಯವರು ಒಳಗೆ ಪ್ರವೇಶಿಸಿ ಶ್ರೀ ತಿಮ್ಮಾರೆಡ್ಡಿಯವರನ್ನು ಕುರಿತು "ಒಂದು ಪ್ರಮುಖ ವಿಷಯದ ಬಗ್ಗೆ ನಿಮ್ಮೊಡನೆ ಮಾತನಾಡಬೇಕಾಗಿದೆ" ಎಂದು ಒಂದು ಕಡೆ ಕರೆದುಕೊಂಡು ಹೋಗಿ ವಿಷಯ ಹೊರಗೆ ಬಂದು "ನಾನು ನಿಮ್ಮನ್ನು ಭಾರತ ರಕ್ಷಣಾ ಶಾಸನದ ಇಂಥಿಂಥ ಕಲಮಿನ ಕೆಳಗೆ ರೆಸ್ಟ್ರಿಕ್ಷನ್ ಮುಕ್ತ ಡಿಟೆಂಷನ್ ಆಜ್ಞೆಯ ವಿರುದ್ಧ ವಾರಂಟ್ ಇಲ್ಲದೆ ದಸ್ತಗಿರಿ ಮಾಡುತ್ತೇನೆ" ಎಂದರು.

ಶ್ರೀಯುತರನ್ನು ನಾಗಸಂದ್ರಕ್ಕೆ ಕರೆದುಕೊಂಡು ಹೋದರೆಂದು ವರದಿ ಬಂದಿದೆ. ದಸ್ತಗಿರಿಯಾದ ಮೇಲೆ ಶ್ರೀಯುತರಿಗೆ ಹಾರತುರಾಯಿಗಳನ್ನು ಅರ್ಪಿಸುವುದಕ್ಕೆ ಪೋಲೀಸರು ಪ್ರತಿಬಂಧಿಸಿದರೆಂದೂ ವರದಿ ಬಂದಿದೆ

ದಸ್ತಗಿರಿಯಾಗಬಹುದೆಂದು ಮೊದಲೇ ನಿರೀಕ್ಷಿಸಿದ ಹಲವಾರು ಪತ್ರಿಕೋದ್ಯೋಗಿಗಳೂ ಮತ್ತು ಕಾಂಗ್ರೆಸ್ ಕಾರ್ಯದರ್ಶಿಗಳೂ ಆದ ಶ್ರೀಯುತರಾದ ಕೆ ಆರ್ ಮಾಧವರಾವ್ ಎಚ್ ಕೆ ವೀರಣ್ಣಗೌಡ ಇವರೂ ಶ್ರೀ ತಿಮ್ಮಾರೆಡ್ಡಿಯವರ ಬಳಿ ಇದ್ದರು

* * *

ಹೇಳಿಕೆ

ಮಿತ್ರ ರಾಷ್ಟ್ರಗಳ ವಿಜಯೋತ್ಸವದ ದಿವಸವೇ ಮೈಸೂರು ಕಾಂಗ್ರೆಸ್ಸಿನ ಅಹಿಂಸಾಯುತವಾದ ರಚನಾತ್ಮಕ ಕಾರ್ಯಕ್ರಮದ ಮೇಲೆ ಮೈಸೂರು ಸರ್ಕಾರದವರು ವಿರೋಧವಾದ ಕಾರ್ಯಕ್ರಮ ಕೈಗೊಳ್ಳಲು ನಿರ್ಧರಿಸಿದ್ದಾರೆ. ಶಾಹಿ ಸಾಮಾಜಿಕ ನ್ಯಾಯ ಮತ್ತು ಸ್ವಾತಂತ್ರ್ಯ ಧ್ಯೇಯಗಳಿಗಾಗಿ ಮಿತ್ರ ರಾಷ್ಟ್ರಗಳ ವಿಜಯದ ಪ್ರಥಮ ಫಲವಿದು ಎಂದು ಮೈಸೂರು ಪ್ರಜೆಗಳಿಗೆ ಸರ್ಕಾರ ತೋರಿಸಿಕೊಟ್ಟಂತಾಗಿದೆ ಸರ್ಕಾರ ನನ್ನ ಮೇಲೆ ವಿಧಿಸಿರುವ ನಿರ್ಬಂಧಕಾಜ್ಞೆಯ ಪರತ್ತುಗಳು ಯಾವೊಬ್ಬ ಆತ್ಮಗೌರವವುಳ್ಳವರೂ ಸಹಿಸಲಾರದಷ್ಟು ಅಪಮಾನಕರವಾಗಿದೆ. ಸರ್ಕಾರದ ಇಂಥಾ ನಿರ್ಬಂಧಕಾಜ್ಞೆ ಹೊರಡಿಸಿರುವುದು ಇದೇ ಪ್ರಥಮವಾರಿಯಲ್ಲಿ ಈಗಾಗಲೇ ೧೬೫ ಮಂದಿಗೆ ಇಂಥ ನಿರ್ಬಂಧಕಾಜ್ಞೆ ಅಲ್ಲದೆ ಇನ್ನೂ ಕಠಿಣವಾದ ಪ್ರತಿಬಂಧಕಾಜ್ಞೆಗಳಿಗೆ ಗುರಿಯಾಗಿ ಎಲ್ಲ ವಿಧವಾದ ಕಷ್ಟನಷ್ಟಗಳನ್ನನುಭವಿಸುತ್ತಿದ್ದಾರೆ ಹಲವರಂತೂ ಸಂಸ್ಥಾನದಿಂದ ಗಡೀಪಾರಾಗಿದ್ದಾರೆ.

ಇಲ್ಲಿ ಮತ್ತು ಸಂಸ್ಥಾನದ ಹೊರಗೂ ಈ ವಿಚಾರದಲ್ಲಿ ಸಾರ್ವಜನಿಕ ಗಮನವನ್ನು ಸೆಳೆಯುವ ಸಲುವಾಗಿ ನಾನು ಈ ಆಜ್ಞೆಯನ್ನು ಮುರಿಯಲು ನಿರ್ಧರಿಸಿದ್ದೇನೆ ನನ್ನ ಈ ಕಾರ್ಯದ ಉದ್ದೇಶ ನೆರವೇರುವುದಾದರೆ ನನ್ನ ವೈಯಕ್ತಿಕ ಕಷ್ಟಗಳೇನೇ ಆಗಲೀ ನನಗದರಿಂದ ಸಂತೃಪ್ತಿಯುಂಟಾಗುವುದು.

ಹೀಗೆಂದು ಮೈಸೂರು ಕಾಂಗ್ರೆಸ್ ಪ್ರಕಟಣೆಯ ಮತ್ತು ಹೊರ ವ್ಯವಹಾರದ ಶ್ರೀ ಎನ್ ಸಿ ತಿಮ್ಮಾರೆಡ್ಡಿಯವರು ತಮ್ಮ ದಸ್ತಗಿರಿಗೆ ಮುಂಚೆ ಪತ್ರಿಕೆಗಳಿಗಿತ್ತ ಹೇಳಿಕೆಯೊಂದರಲ್ಲಿ ತಿಳಿಸಿದ್ದಾರೆ.

The Janavani
18.8.45.

The Janavani publishes the statement issued by Mr. N. C. Thimma Reddy on the eve of his arrest.

Submitted

55 53

ಜನವಾಣಿ
ಸೋಮವಾರ ೨೦ನೇ ಆಗಸ್ಟ್ ೧೯೪೫
೨೦ನೇ ಆಗಸ್ಟ್ ೧೯೪೫

The Janavani
20.8.45

The "Janavani" publishes the statement issued by Mr. K.V. Veeranna Gowda criticising the internment order served on Mr. N.C. Thimma Reddy.

Submitted

ಸರ್ಕಾರದ ಧೋರಣೆ ಸಹಕಾರಭಾವದ್ದಲ್ಲ

ಶ್ರೀ ವೀ ಣ್ಣಗೌಡರ ಹೇಳಿಕೆ

ಬೆಂಗಳೂರು ೧೯ ನೇ

ಮೈಸೂರು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶ್ರೀ ಎಚ್. ಕೆ ವೀರಣ್ಣಗೌಡರು ಪತ್ರಿಕೆಗಳಿಗೆ ಈ ಹೇಳಿಕೆ ಕೊಟ್ಟಿದ್ದಾರೆ:—

ಮೈಸೂರು ಸರ್ಕಾರದ ವರ್ತನೆ ವಿಚಿತ್ರವಾಗಿದೆ. ಕಳೆದ ೬ ವರ್ಷಗಳಿಂದ ನಡೆಯುತ್ತಿದ್ದ ಘೋರ ಯುದ್ಧ ಈಗ ತಾನೆ ಕೊನೆಗೊಂಡಿದೆ ಪ್ರಪಂಚದ ಬೇರೆ ಬೇರೆ ನಾಗರಿಕ ದೇಶದವರು ತಮ್ಮತಮ್ಮ ರಾಜ್ಯದಲ್ಲಿ ಶಾಂತಿ ಸಮಾಧಾನ ನೆಲೆಗೊಳಿಸಲು ಅತ್ಯುತ್ಸಾಹದಿಂದಿದ್ದಾರೆ ಅದಕ್ಕೆ ಅಗತ್ಯವಾದ ಪುನರ್ನಿರ್ಮಾಣ ಕಾರ್ಯಕ್ಕೆ ಕೈಗೊಂಡು ಅದು ಯಶಸ್ವಿಯಾಗಿ ನಡೆಯಲು ಜನ ಬೆಂಬಲ ಕೋರುತ್ತಿದ್ದಾರೆ. ಭರತಖಂಡದಲ್ಲಿ ಬ್ರಿಟಿಷ್ ಸರ್ಕಾರ ತನ್ನ ವೈರಿಯೆಂದು ಭಾವಿಸಿದ್ದ ಆಜಾದ್ ಭಾರತ ರಾಷ್ಟ್ರ ಮಹಾ ಸಭೆಯ ನಾಯಕರನ್ನು ಬಾಧ್ಯಮುಕ್ತರನ್ನಾಗಿ ಮಾಡಿ ಅವರನ್ನು ಗೌರವದಿಂದ ಕ್ಷಿಬಿರಮಾಡಿಕೊಂಡು ಭಾರತದ ಮಂತ್ರಿಮಂಡಲದ ರಾಜ್ಯಾಡಳಿತ ಕಾರ್ಯ ಅವರೊಡನೆ ಸಿಮ್ಲಾದಲ್ಲಿ ಸಮಾಲೋಚನೆ ನಡೆಸಿದರು ಆಜ್ಞಾಪಿತ ಗಡಿಪಾರು ಸಂಬಂಧ ಮರಣದಂಡನೆ ಗುರಿಯಾಗಿದ್ದವರಿಗೆಲ್ಲ ವೈಸ್‌ರಾಯರು ಇತ್ತೀಚೆಗೆ ಕ್ಷಮಾದಾನ ಮಾಡಿ ಇಡಿ ದೇಶದ ಕೃತಜ್ಞತೆಗೆ ಪಾತ್ರರಾಗಿದ್ದಾರೆ ಹೀಗೆ ಪ್ರಪಂಚದ ಹಾಗೂ ಬ್ರಿಟಿಷ್ ಸರ್ಕಾರದ ಘೋರಣೆ ಸಹಕಾರ ಮನೋಭಾವದಿಂದ ಕೂಡಿದೆ ಆದರೆ, ಮೈಸೂರು ಸರ್ಕಾರದ ಧೋರಣೆ ತದ್ವಿರುದ್ಧವಾಗಿದೆ.

ಸಂಸ್ಥಾನದಲ್ಲಿ ಕಲಕಿರುವ ರಾಜಕೀಯ ವಾತಾವರಣ ಶಾಂತಮಯವಾಗಲು ಮೈಸೂರು ಕಾಂಗ್ರೆಸ್‌ನ ಕೆಲವು ಸಮಿತಿಗಳು ನ್ಯಾಯಬಾಹಿರವೆಂದು ಸಾರುವುದನ್ನು ಪುನ್ನಾ ಮಾಡಬೇಕು. ಸಂಸ್ಥಾನದ ನಾನಾ ಭಾಗಗಳಲ್ಲಿರುವ ಪ್ರತಿಬಂಧಕಾಜ್ಞೆಗಳನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು ೧೬೦ ಮಂದಿ ಸಿಂಹಲೂ ಹೆಚ್ಚಾಗಿ ಕೆಲಸಗಾರರ ಮೆ ಲಿರುವ ಗಡೀಪಾರ್ ಆಜ್ಞೆಗಳನ್ನು ಮುಕ್ತಾಯಗೊಳಿಸಬೇಕು ಎಂದು ಕಳೆದ ಇಪ್ಪತ್ತು - ತಿಂಗಳಿಂದಲೂ ಮೈಸೂರು ಕಾಂಗ್ರೆಸ್ ಸರ್ಕಾರವನ್ನು ಒತ್ತಾಯಪಡಿಸುತ್ತಿದೆ. ಮೈಸೂರು ಕಾಂಗ್ರೆಸ್ ನ್ಯಾಯವಾದ ಹಾಗೂ ಸಂಸ್ಥಾನದ ಕ್ಷೇಮಕ್ಕೆ ಅಗತ್ಯವಾದ ಈಬೇಡಿಕೆಗಳನ್ನು ಸರ್ಕಾರ ಒಂದೇ ಸಮ ನಿರಾಕರಿಸುತ್ತಾ ಬಂದಿದೆ ಅಷ್ಟೆ ಅಲ್ಲ, ಬಹಿರಂಗ ಸಭೆ, ಮೆರವಣಿಗೆ ಇತ್ಯಾದಿಗಳಿಗೆ ಅಡ್ಡಿ ಆತಂಕಗಳನ್ನು ತಂದೊಡ್ಡುತ್ತಲೇ ಇದೆ. ಈ ಬಗೆಯ ವರ್ತನೆಯಿಂದ ಜನ ನೆಮ್ಮದಿಗೆ ಭಂಗ ಬರುವುದಲ್ಲದೆ ಜನರ ಅಸನ ಹಕ್ಕು ಬಾಧ್ಯತೆಗಳಿಗೆ ಧಕ್ಕೆ ಬರುವುದೆಂದು ಹೇಳುತ್ತಿರುವ ಮಾತು ಸರ್ಕಾರದವರ ಮೇಲೆ ಪರಿಣಾಮವುಂಟುಮಾಡಿದಂತೆ ಕಾಣುವುದಿಲ್ಲ ಇಲ್ಲದಿದ್ದರೆ ಶ್ರೀ ತಿಮ್ಮಾರೆಡ್ಡಿಯವರ ಮೇಲೆ ಅನ್ಯಾಯವೂ ಅನವಶ್ಯಕವೂ ಆದ ನಿರ್ಬಂಧ ಮತ್ತು ಪ್ರತಿಬಂಧಕಾಜ್ಞೆಯನ್ನು ಹೊರಡಿಸಿ ಅವರನ್ನು ಪಶ್ಚಾತ್ತಾಪ ಮಾಡುತ್ತಿರಲಿಲ್ಲ.

ಶ್ರೀ ರೆಡ್ಡಿಯವರು ೫-೬ ವರ್ಷಗಳಿಂದಲೂ ಬೆಂಗಳೂರಿನಲ್ಲಿ ಮನೆ ಮಾಡಿಕೊಂಡು ಸಂಸಾರ ಸಹಿತ ವಾಸವಾ ಡ್ತಾರೆ ಅವರ ಮನೆಯಲ್ಲಿ ಸ್ತ್ರೀಲು ಮತ್ತು ಕಾಲೇಜಿಗೆ ಹೋಗುವ ಮಕ್ಕಳಿದ್ದಾರೆ ಇಂತಹವರನ್ನು ೩ ದಿನಗಳೊಳಗಾಗಿ ಬೆಂಗಳೂರು ಬಿಟ್ಟು ಹೋಗಬೇಕೆಂದೂ ಭಾಷಣ ಮಾಡಕೂಡದೆಂದೂ ಹೇಳಿಕೆ ಕೊಡಕೂಡದೆಂದೂ ಹೈದರಾಬಾದಿನಲ್ಲೇ ವಾಸಿಸಬೇಕೆಂದೂ ಕಟ್ಟುಪಾಡಿದು ವು ಪ್ರತಿನಾಗರಿಕ ವ್ಯಕ್ತಿಯ ಗೌರವಕ್ಕೆ ಕುಂದುಂಟುಮಾಡುವಂತಹುದು.

ಶ್ರೀ ರೆಡ್ಡಿಯವರಿಗೆ ಈ ಆಜ್ಞೆಯಿಂದ ವೈಯಕ್ತಿಕವಾಗಿರುವುದಕ್ಕಿಂತ ಜತೆಗೆ ಮೈಸೂರು ಕಾಂಗ್ರೆಸ್ ಮುಖ್ಯ ಕಾರ್ಯಕಲಾಪಗಳಿಗೂ ಅಡ್ಡಿಯಾಗಿದೆ ರಚನಾತ್ಮಕ ಕಾರ್ಯಕ್ಕೆ ಹೆಚ್ಚು ಗಮನ ಕೊಡಬೇಕೆಂದು ಮೈಸೂರು ಕಾಂಗ್ರೆಸ್ ಮುಖಂಡರು ನಿರ್ಧರಿಸಿ, ಶ್ರೀ ರೆಡ್ಡಿಯವರಿಗೆ ವಿರೇನಾಡುಗಳ ಸಂಬಂಧ ಹಾಗೂ ಪ್ರಕಟನ ಕಾರ್ಯದಂತಹ ಗುರುತರ ಕರ್ತವ್ಯವನ್ನು ವಹಿಸಲಾಗಿತ್ತು ಹೀಗಿರುವಲ್ಲಿ, ಅವರು ಬೆಂಗಳೂರಲ್ಲೇ ಇರಕೂಡದು, ಭಾಷಣ ಮಾಡಕೂಡದು, ಹೇಳಿಕೆ ಕೊಡಕೂಡದು ಎಂದರೆ ಮೈಸೂರು ಕಾಂಗ್ರೆಸ್ ನಡೆಸಬೇಕೆಂದಿರುವ ಶಾಂತಿಯುತ ರಚನಾತ್ಮಕ ಕಾರ್ಯಕ್ಕೆ ಸರ್ಕಾರ ಅಡಚಣೆ ಮಾಡಿದಂತಾಯಿತು ಮೈಸೂರು ಕಾಂಗ್ರೆಸ್‌ನ ಹಾಗೂ ಅದರ ಮುಖಂಡರ ಬಗ್ಗೆ ಸರ್ಕಾರ ಆಗಿಂದಾಗ್ಗೆ ಪ್ರಕಟಿಸುತ್ತಿರುವ ಈ ಮನೋಭಾವನೆ ಸರ್ಕಾರಕ್ಕೆ ಸಲ್ಲದು ಈ ಬಗೆಯ ವರ್ತನೆಯಿಂದಾಗುವ ಪ್ರತಿಕ್ರಿಯೆಯನ್ನು ಸರ್ಕಾರ ನಿರ್ಲಕ್ಷಿಸಿರುವುದು ನಿಜವಾಗಿಯೂ ಆಶ್ಚರ್ಯ.

The Nava Karnataka
20-8-45

The "Navakarnataka" publishes a statement given by the President of the State Congress on the imprisonment order served on Mr. N. G. Thimma Reddy.

Submitted

ಬೆಂಗಳೂರು

ಬಂಧನಸಿದ್ದೊಂದು; ಆದುದೇ ಬೇರೆ!

ಶ್ರೀ ನಿಜಲಿಂಗಪ್ಪನವರ ಹೇಳಿಕೆ

ಬೆಂಗಳೂರು ೪ ೧೮

ಕಾಂಗ್ರೆಸ್ ನಾಯಕರಾದ ಶ್ರೀ ಎನ್. ಜಿ. ತಿಮ್ಮಾರೆಡ್ಡಿಯವರ ಮೇಲೆ ಪ್ರತಿಬಂಧಕಾಜ್ಞೆ ಮತ್ತು ಬಂಧನದ ಬಗ್ಗೆ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪನವರು ಈ ರೀತಿ ಹೇಳಿಕೆ ಕೊಟ್ಟಿದ್ದಾರೆ.

"ಯುದ್ಧ-ಮುಕ್ತಾಯದೊಂದಿಗೆ ಅರ್ಧ ಡಜನ್ ಸರ್ಕಾರಗಳ ಪದಚ್ಯುತಿಗೆ ಮುಕ್ತಾಯವಾಗಿ, ಮೈಸೂರು ಕಾಂಗ್ರೆಸ್ ಸಭೆಗಳ ಮೇಲಿನ ಪ್ರತಿಬಂಧಕಾಜ್ಞೆಗಳು ಕೊಲಗುನವೆಂದು ನಾನು ನೀರೀಕ್ಷಿಸಿದ್ದೆ. ಆದರೆ ಈಗಾದುದೇ ಬೇರೆ! ಸರಕಾರದವರು ಬಹುಕಾಲದಿಂದಲೂ ಬೆಂಗಳೂರಲ್ಲಿರುವ ಶ್ರೀ ತಿಮ್ಮಾರೆಡ್ಡಿಯವರು ದೂರದ ಹಳ್ಳಿಯಲ್ಲಿರಬೇಕೆಂದೂ, ಸಾರ್ವಜನಿಕ ಭಾಷಣ ಮಾಡಬಾರದೆಂದೂ, ಪತ್ರಿಕೆಗಳಿಗೆ ಹೇಳಿಕೆ ಕೊಡಬಾರದೆಂದೂ, ಪ್ರತಿಬಂಧಕಾಜ್ಞೆ ಮಾಡಿದ್ದೇ ಅಲ್ಲದೆ, ಅವರ ಚಲನವಲನಗಳನ್ನೂ ಮಾಡಿದ್ದಾರೆ. ಇದು ಅಪ್ರಿಯವಾದ ಘಟನೆ ಸರಕಾರದ ಈ ಕೃತ ದೂರದೃಷ್ಟಿಯಿಂದಾಗಿ ಭಾರತದ ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸಲು ವೈಸರಾಯರು ಮಾಡುತ್ತಿರುವ ಕೆಲಸಗಳಿಂದ ಮೈಸೂರು ಸರಕಾರದವರು ಪಾಠ ಕಲಿಯಬೇಕಾಗಿತ್ತು. ಜಗತ್ತೇ ಈಗ ಶಾಂತಿ, ಸೌಹಾರ್ದವನ್ನು ಬಯಸುತ್ತಿದೆ. ಆದರೆ ಮೈಸೂರು ಸರಕಾರದವರಿಗೆ ಈ ವಾಸ್ತವ ವಿಚಾರಗಳು, ಹೊರ ಜಗತ್ತಿನ ಅರಿವೇ ಇದ್ದಹಾಗಿಲ್ಲ.

ಶ್ರೀ ತಿಮ್ಮಾರೆಡ್ಡಿಯವರು ಕಾಂಗ್ರೆಸ್ಸಿನ ಪ್ರಚಾರಕಾರ್ಯಾಧಿಕಾರಿಗಳೂ ಸರಕಾರದವರಿಂದ ನೇಮಕರೇ ಪ್ರತಿಬಂಧಕಾಜ್ಞೆ ಜಾರಿಮಾಡಿ, ಅವರನ್ನು ಬಂಧಿಸಿರುವುದನ್ನು ನೋಡಿದರೆ, ಮೈಸೂರು ಕಾಂಗ್ರೆಸ್ ಸಂಸ್ಥಾನದ ಒಳಗಾಗಲಿ, ಹೊರಗಾಗಲಿ ಪ್ರಚಾರ ಕಾರ್ಯ ನಡೆಸುವುದು ಸರಕಾರಕ್ಕೆ ಒಪ್ಪಿಗೆ ಇಲ್ಲವೆಂದೇ ಅರ್ಥವಾಗುತ್ತದೆ. ಅಷ್ಟೇ ಅಲ್ಲ; ಶ್ರೀ ರೆಡ್ಡಿಯವರು ಕೂಟ್ಟ ಹೇಳಿಕೆಗಳು ಸರಕಾರಕ್ಕೆ ಪ್ರಿಯವಾಗಿಲ್ಲವೆಂದೂ ಗೊತ್ತಾಗುತ್ತದೆ. ಸತ್ಯ ಅಪ್ರಿಯವಾಗುವುದೂ ಸತ್ಯವೇ!

ಸಂಸ್ಥಾನದಲ್ಲಿ ಸಾರ್ವಜನಿಕ ಶಾಂತಿ, ಸೌಹಾರ್ದಗಳನ್ನು ನೆಲೆಸುವಂಥ ಕೆಲಸ ಮಾಡದೇ ಅನವಶ್ಯವಾಗಿ ಅಶಾಂತಿಯನ್ನು ಕೆರಳಿಸುವಂಥ, ಅವಸರದ ಆಜ್ಞೆಯನ್ನು ಸರಕಾರದವರು ಮಾಡಿದ್ದರಿಂದ ಜನತೆಗಾಗಿತ್ತು. ಅದೂ ಮೈಸೂರು ಕಾಂಗ್ರೆಸ್ ರಚನಾತ್ಮಕ ಕಾರ್ಯಕ್ರಮವನ್ನು ಕೈಕೊಂಡಿದ್ದಾಗ ಈ ಆಜ್ಞೆ ಇದ್ದದ್ದೂ ಕೋಚನೀಯವಾಗಿದೆ.

57 57

The Vishwakarnataka

20. 8. 45


ಸರಕಾರದ ನೀತಿ ಖಂಡನೀಯ
ಉತ್ತರ ಕರ್ನಾಟಕ ಪಾರ್ಟಿಯ ಬೆಂಗಳೂರು ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಎಂ. ಎಸ್. ರಾಮಚಾರಿಯವರು ಶ್ರೀ ಎನ್. ಎ. ತಿಮ್ಮಾರೆಡ್ಡಿಯವರ ಮೇಲಿನ ಸರಕಾರವ ಆಜ್ಞೆ ಹಾಗೂ ಅವರ ಸ್ಥೈಯ ಬಗ್ಗೆ ಹೇಳಿಕೆ ಕೊಡುತ್ತಾ ಸಾರ್ವಜನಿಕ ನಾಗರಿಕ ಹಕ್ಕು ಬಾಧ್ಯತೆಗಳನ್ನು ಮಟ್ಟಹಾಕುವ ಸುರ ರಡೆ ಈ ನೀತಿ ಖಂಡನೀಯ ಸರಕಾರ ಕೂಡಲೇ ಶ್ರೀ ರೆಡ್ಡಿಯವರ ಮೇಲಿನ ಆಜ್ಞೆ ಹಿಂತೆಗೆದುಕೊಂಡು ಸಂಸ್ಥಾನದಲ್ಲಿನ ಎಲ್ಲ ಪ್ರತಿಬಂಧಕಗಳನ್ನು ತೆಗೆದುಹಾಕಬೇಕು-ಎಂದಿದಾರೆ.

The Secretary of the Bangalore Branch of the Communist Party has issued a statement criticising the issue of the ~~restrict~~ internment order against Mr. N.C. Thimma Reddy.

Submitted

B

58 57

The Tanavani
20.8.65

ಸರ್ಕಾರ ಆಜ್ಞೆಯನ್ನು ವಾಪಸು ತೆಗೆದುಕೊಳ್ಳಲಿ

ಮೈಸೂರಿನ ಕಾಂಗ್ರೆಸ್ ಪ್ರಮುಖರ ಸಲಹೆ

[ಸ್ವ ಸು] ಮೈಸೂರು ಆ ೨೦ ಶ್ರೀ ತಿಮ್ಮಾರೆಡ್ಡಿಯವರ ಮೇಲಣ ಆಜ್ಞೆ ಸಂಬಂಧದಲ್ಲಿ ಮೈಸೂರಿನ ಶ್ರೀಗಳಂದ ಎಸ್. ಚನ್ನಯ್ಯ, ಟಿ ಪುರಿಯಪ್ಪ, ರಂಗರಾವಯ್ಯ, ಕೆ ಎಸ್. ನಂಜುಂಡಾರಾಯಣರಾಯರು ಈ ರೀತಿ ಹೇಳಿಕೆ ಇತ್ತಿದ್ದಾರೆ:—

ಪ್ರಪಂಚದಲ್ಲಿ ಶಾಂತಿ ಏರ್ಪಾಡು ನಡೆಯುತ್ತಿರುವ ಈ ಕಾಲದ ವಿಶೇಷ ಕಾನೂನುಗಳು ಮಾಯವಾಗುತ್ತಿವೆ. ಪ್ರಾಂತಗಳ ಕಾನೂನುಗಳನ್ನು ಪನ್ನಮಾಡಿ ಕಾಂಗ್ರೆಸ್ ವೇಲಿದ್ದ ಆಜ್ಞೆಗಳನ್ನು ವಾಪಸ್ ತೆಗೆದುಕೊಂಡು ಅವುಗಳು ಕೆಲಸ ಮಾಡಲು ಅನುಕೂಲ ಮಾಡುವ ರೀತಿ ಏರ್ಪಾಡು ಆಗುತ್ತಿದೆ ಮೈಸರಾಯರು ಹಳೆಯದನ್ನೆಲ್ಲಾ ಮರೆತು ಸಹಕಾರ ಕೊಡಿರೆಂದು ಕೇಳುತ್ತಿರುವಾಗ ಮೈಸೂರು ಸರಕಾರದವರು ನಡೆವಳಿಕೆ ಮೈಸೂರು ದೇಶದ ಪ್ರಜೆಗಳಿಗೆ ವಿಸ್ಮಯವನ್ನುಂಟುಮಾಡಿದೆ. ಮೈಸೂರು ಸರ್ಕಾರದವರು ಈ ರೀತಿ ಮಾಡಿರುವುದು ಇದೇ ಮೊದಲಲ್ಲ. ಎಷ್ಟೋ ಸಾರಿ ದೂರದೃಷ್ಟಿಯಿಲ್ಲದೆ ಈ ರೀತಿ ಮಾಡಿ ಪ್ರಜೆಗಳ ಮನಸ್ಸನ್ನು ಕೆಡಿಸಿ ಉದ್ರೇಕಗೊಳಿಸಿದ್ದಾರೆ ಶ್ರೀ ತಿಮ್ಮಾರೆಡ್ಡಿಯವರು ಹೇಳಿರುವುದು ತಾನೆ ಏನು? ಅವರ ಹೇಳಿಕೆಗಳಲ್ಲಿ ಹೊಸದೇನು ಇಲ್ಲ. ಮೈಸೂರು ಪ್ರಜೆಗಳ ರಕ್ತದಲ್ಲಿ ಸೇರಿರುವ ಸ್ವಾತಂತ್ರ್ಯದ ವಿಚಾರ ಎತ್ತಿ ಮಾತನಾಡಿದ್ದಾರೆ.

ಈ ರೀತಿಯ ಆಜ್ಞೆಗಳಿಂದ ದೇಶದ ಪ್ರಜೆಗಳಲ್ಲಿ ಭಯವುಂಟಾಗುವುದಿಲ್ಲ. ಈ ರೀತಿ ಸರ್ಕಾರ ತಿಳಿದುಕೊಂಡಿದ್ದರೆ ಅದು ತಪ್ಪು. ಇದರಿಂದ ಉದ್ರೇಕ ಇನ್ನೂ ಹೆಚ್ಚುತ್ತದೆ ಆದ್ದರಿಂದ ಸರ್ಕಾರದವರು ಮುಂದಾಲೋಚನೆ ಮಾಡಿ ಕೂಡಲೆ ಆಜ್ಞೆಗಳನ್ನು ವಾಪಸ್ ತೆಗೆದುಕೊಂಡು ಶಾಂತಿ ವಾತಾವರಣವನ್ನು ಏರ್ಪಾಡು ಮಾಡಬೇಕು ಕಾಂಗ್ರೆಸ್ಸಿನವರಲ್ಲಿ ಸ್ನೇಹ ಬೆಳೆಸಬೇಕು ಇದರಿಂದ ದೇಶದಲ್ಲಿ ಶಾಂತಿಯೆ?

ಈ ಸಂಧರ್ಭದಲ್ಲಿ ಶ್ರೀಮಾನ್ ತಿಮ್ಮಾರೆಡ್ಡಿಯವರನ್ನು ನಾವು ಅಭಿನಂದಿಸಲೇಬೇಕು. ವ್ಯಕ್ತಿಗಳ ಸ್ವಾತಂತ್ರ್ಯಕ್ಕೆ ಧಕ್ಕೆ ಬರುವುದನ್ನು ಯಾರೂ ಸಹಿಸಲು ಸಾಧ್ಯವಿಲ್ಲ

ದೇಶದ ಪ್ರಜೆಗಳು ಶಾಂತಿಯಿಂದ ಇರುವಂತೆ ಸರ್ಕಾರದ ಕಾರ್ಯಕ್ರಮವನ್ನು ಎಚ್ಚರಿಸಿ ಕಾಂಗ್ರೆಸ್ಸಿಗೆ ಶಕ್ತಿ ಕೊಡಿಸಬೇಕೆಂದು ನಮ್ಮ ಪ್ರಾರ್ಥನೆ

Mess. S. Channiah, T. Hari affa, Rangaraniah and others have issued a statement criticising the ~~statement~~ issue of a ~~statement~~ against Mr. N.C. Thimma Reddy.

Submitted

[illegible]

59 6

JANAVANI 16-8-45

The Janavani.
16.8.45

ಶ್ರೀ ತಿಮ್ಮಾರೆಡ್ಡಿಯವರಿಗೆ ಅಸ್ವದಿಗ್ಬಂಧನ

The 'Janavani' reports that Mr. Thimmareddy refused to receive the internment order served on him.

Submitted

ನೋಟೀಸನ್ನು ಅಂಗೀಕರಿಸಲು ಶ್ರೀಯುತರ ನಿರಾಕರಣೆ

ಬೆಂಗಳೂರು ೮, ೧೬

ಮೈಸೂರು ಕಾಂಗ್ರೆಸ್ ವಿದೇಶಾಂಗ ವ್ಯವಹಾರ ಪ್ರಕಟಣ ಶಾಖೆಯ ಮುಖ್ಯಾಧಿಕಾರಿಗಳಾದ ಶ್ರೀ ಎಸ್. ಟಿ. ತಿಮ್ಮಾರೆಡ್ಡಿಯವರ ವೇಲೆ ಸರ್ಕಾರದವರು ನೋಟೀಸ್ ಜಾರಿ ಮಾಡಿ, ೧. ಗೋರಿಬಿದನೂರಿನಲ್ಲಿರುವ ನಾಗಸಂದ್ರ ಗ್ರಾಮದಲ್ಲೇ ಇರತಕ್ಕದ್ದೆಂದೂ, ಅದನ್ನು ಬಿಟ್ಟು ಹೊರಗೆ ಹೋಗಕೂಡದೆಂದೂ ೨ ಭಾಷಣ ಮಾಡಕೂಡದೆಂದೂ, ಸಭೆಗಳಲ್ಲಿ ಒಂದೆರಡು ಮಾತುಗಳನ್ನಾಗಲೀ ಆಡಕೂಡದೆಂದೂ, ೩ ಪತ್ರಿಕೆಗಳಿಗೆ ಹೇಳಿಕೆ ಕೊಡಕೂಡದೆಂದೂ ಅಪ್ಪಣೆದಿಗ್ಬಂಧನ ಹಾಕಿದ್ದಾರೆ

ಈ ಬೇಗ್ಗೆ ಸರ್ಕಾರಿ ನೋಟೀಸನ್ನು ಪೋಲೀಸ್ ಇನ್ಸ್‌ಪೆಕ್ಟರು ಶ್ರೀ ತಿಮ್ಮಾರೆಡ್ಡಿಗಳಮೇಲೆ ಜಾರಿಮಾಡಲು ಬಂದರು ;

ನೋಟೀಸು ತೆಗೆದುಕೊಳ್ಳಲು ನಿರಾಕರಣೆ

ಆಗ ಶ್ರೀ ತಿಮ್ಮಾರೆಡ್ಡಿಯವರು ಈ ಅನ್ಯಾಯವಾದ ನೋಟೀಸನ್ನು ತೆಗೆದುಕೊಳ್ಳುವುದರಿಂದ ಆತ್ಮಗೌರವಾನ್ವಿತನಾದ ವ್ಯಕ್ತಿಯ ಘನತೆಗೆ ಕಳಂಕ ಉಂಟಾಗುವುದರಿಂದ ಆ ನೋಟೀಸನ್ನು ತೆಗೆದುಕೊಳ್ಳಲು ನಿರಾಕರಿಸುವುದಾಗಿ ತಿಳಿಸಿ ಅದೇ ರೀತಿ ನೋಟೀಸು ಹಿಂಭಾಗದಲ್ಲಿ ಬರೆದು ಕಳುಹಿಸಿದರು

—ಹೀಗೆಂದು ಪ್ರಕಟಣ ಶಾಖೆ ಕಾರ್ಯದರ್ಶಿಗಳಾದ ಶ್ರೀಮಾಧವರಾಯರು ತಿಳಿಸುತ್ತಾರೆ.

ವಿಶ್ವಕರ್ನಾಟಕ | ಆಗಸ್ಟ್ ೧೬ ೧೯೪೫

ಶ್ರೀ ಶಿವಮ್ಮಾರೆಡ್ಡಿಯವರಿಗೆ ಬೀಗಮುದ್ರೆ!

ಬೆಂಗಳೂರು ೪ ೧೬

ಮೈಸೂರು ಕಾಂಗ್ರೆಸ್ಸಿನ ಪ್ರಚಾರ ಶಾಖೆಯ ಸದಸ್ಯರಾದ ಶ್ರೀ ಯಲ್ ಸಿ ಶಿವಮ್ಮಾರೆಡ್ಡಿಯವರು, ಗೋರಿಬಿದನೂರು ತಾಲ್ಲೂಕಿನಲ್ಲಿರುವ ನಾಗವೆಂದ್ರ ಹಳ್ಳಿಯಲ್ಲಿ ಹೋಗಕೂಡದೆಂದೂ, ಸಾರ್ವಜನಿಕ, ಅ-ಸಾರ್ವಜನಿಕ ಭಾಷಣಗಳನ್ನಾಗಲೀ ಮಾಡಕೂಡದೆಂದೂ, ಯಾವುದೇ ಹೇಳಿಕೆಗಳನ್ನು ಕೊಡಕೂಡದೆಂದೂ, ಸರಕಾರದ ಆಜ್ಞೆಯು ಈ ದಿನ ಬೆಳಿಗ್ಗೆ ೧೦-೩೦ಕ್ಕೆ ಅವರ ಮೇಲೆ ಜಾರಿಯಾಯಿತು. ಶ್ರೀ ಶಿವಮ್ಮಾರೆಡ್ಡಿಗಳು ಈ ಆಜ್ಞೆಯಂತೆ ನಡೆಯಲು ತಮ್ಮ ಸಮ್ಮತಿಯನ್ನು ತೋರಿಸಿದ್ದಾಗಿಯೂ, ಆಜ್ಞೆಯು ನ್ಯಾಯವಲ್ಲವೆಂದೂ ಆ ಆಜ್ಞೆಯ ಪತ್ರದ ಮೇಲೆ ಬರೆದು ಹಿಂತಿರುಗಿಸಿದ್ದಾರೆ

The Vishwakarnataka 16.8.45

18-8-45

The Deshabandhu
18.8.45

The Deshabandhu publishes a report of the arrest of Mr. V.C. Thimmareddy.

Submitted

DESHABANDHU-A

ಶ್ರೀ ತಿಮ್ಮಾರೆಡ್ಡಿಯವರ ಬಂಧನ

ಬೆಂಗಳೂರು ಆ ೧೬

೨೪ ಘಂಟೆಗಳಲ್ಲಿ ಬೆಂಗಳೂರು ನಗರವನ್ನು ಬಿಟ್ಟು ನಾಗಸಂದ್ರಗ್ರಾಮದಲ್ಲಿ ನೆಲಸಬೇಕೆಂದು ಆಜ್ಞಾಪ್ತರಾದ ಶ್ರೀ ವಿ. ಸಿ. ತಿಮ್ಮಾರೆಡ್ಡಿಯವರು ಆಜ್ಞೋಲ್ಲಂಘನಮಾಡಿದ ಪ್ರಯುಕ್ತ ಈದಿನ ಬೆಳಗ್ಗೆ ೧೨॥ ಘಂಟೆಗೆ ಅವರನ್ನು, ಸ್ಪೆಷಲ್ ಬ್ರಾಂಚಿನ ಇನ್‌ಸ್ಪೆಕ್ಟರಾದ ಶ್ರೀ ಟಿ.ಕೆ. ನಾರಾಯಣಮೂರ್ತಿಯವರು ಗಾಂಧೀನಗರದಲ್ಲಿರುವ ಅವರ ಮನೆಯಲ್ಲಿ ಡಿಟೆನ್‌ಷನ್ ಆಂಡ್ ರೆಸ್ಟ್ರಿಕ್ಷನ್ ಆರ್ಡರ್ (೧೯೪೫) ಪ್ರಕಾರ ಬಂಧಿಸಿದರು. ಅವರನ್ನು ವ್ಯಾನ್‌ನಲ್ಲಿ ಕೂರಿಸಿಕೊಂಡು ಹೋಗಲಾಯಿತು.

ನಾಗಸಂದ್ರಕ್ಕೊಯ್ದು ಬಿಡುವರು

ಪೋಲೀಸಿನವರು ಶ್ರೀಮಾನ್ ತಿಮ್ಮಾರೆಡ್ಡಿಯವರನ್ನು ಅವರ ಸ್ವಗ್ರಾಮವಾದ ನಾಗಸಂದ್ರಕ್ಕೆ ಕರೆದೊಯ್ದು ಅಲ್ಲಿ ಬಿಟ್ಟುಬರುವರು.

62 67

SADHVI, MYSORE

19—8—1945

ತಿಮ್ಮಾರೆಡ್ಡಿಯವರ ದಸ್ತಗಿರಿ

ಸ್ವಂ.ಸು.] ಬೆಂಗಳೂರು ೧೮

೨೮ ಗಂಟೆಯೊಳಗೆ ಬೆಂಗಳೂರು ನಗರವನ್ನು ಬಿಟ್ಟು ತಮ್ಮ ಗ್ರಾಮವಾದ ನಾಗಸಂದ್ರಕ್ಕೆ ಹೋಗಿ ಆರು ತಿಂಗಳಕಾಲ ಅಲ್ಲಿಂದ ಹೊರಕ್ಕೆ ಬರಕೂಡದೆಂದೂ, ಭಾಷಣ ಮಾಡಕೂಡದೆಂದೂ ವಗೈರೆ ಪ್ರತಿಬಂಧಕಾಜ್ಞೆಗೆ ಗುರಿಯಾಗಿದ್ದ ಶ್ರೀ ಎಸ್. ಸಿ. ತಿಮ್ಮಾರೆಡ್ಡಿಯವರು ಆದರಂತೆ ನಡೆಯಲಿಲ್ಲವಾದ್ದರಿಂದ ಅವರನ್ನು ನಿನ್ನೆ ಮಧ್ಯಾಹ್ನ ಪೋಲೀಸಿನವರು ದಸ್ತಗಿರಿಮಾಡಿ ಅವರ ಊರಿಗೆ ಕರೆದುಕೊಂಡು ಹೋದರು. ಇಂತಹ ನಿರ್ಬಂಧಗಳ ಅಯುಕ್ತತೆಯನ್ನು ಎಲ್ಲರಿಗೂ ಬಯಲು ಮಾಡುವುದಕ್ಕಾಗಿಯೇ ತಾವು ಹೀಗೆ ಮಾಡಿರುವುದಾಗಿ ಅವರು ಹೇಳಿರುವರು.

The Sadhvi 19.8.45

The Sadhvi publishes a report of the arrest of Mr. M. C. Thimma Reddy.

Submitted

63 64

ಮಾ ತೃ ಭೂ ಮಿ

೨೦-೮-೪೫

ಶ್ರೀ ಶಿವಮ್ಮಾರೆಡ್ಡಿಯವರ ದಸ್ತಗಿರಿ

೨೪ ಗಂಟೆಯೊಳಗೆ ಬೆಂಗಳೂರು ನಗರವನ್ನು ಬಿಟ್ಟು ತವ್ಮ ಗ್ರಾಮವಾದ ನಾಗಸಂದ್ರಕ್ಕೆ ಹೊಗಿ ಆರು ತಿಂಗಳಕಾಲ ಅಲ್ಲಿಂದ ಹೊರಕ್ಕೆ ಬರಕೂಡದೆಂದೂ, ಭಾಷಣಮಾಡಕೂಡದೆಂದೂ ವಗೈರೆ ಪ್ರತಿಬಂಧಕಾಜ್ಞೆಗೆ ಗುರಿಯಾಗಿದ್ದ ಶ್ರೀ ಎಸ್. ಸಿ. ಶಿವಮ್ಮಾರೆಡ್ಡಿಯವರು ಅದರಂತೆ ನಡೆಯಲಿಲ್ಲವಾದ್ದರಿಂದ ಅವರನ್ನು ನಿನ್ನೆ/ ಮಧ್ಯಾಹ್ನ ಪೋಲೀಸಿನವರು ದಸ್ತಗಿರಿಮಾಡಿ ಅವರ ಊರಿಗೆ ಕರೆದುಕೊಂಡು ಹೋದರು. ಇಂತಹ ನಿರ್ಬಂಧಗಳ ಅಯುಕ್ತತೆಯನ್ನು ಎಲ್ಲರಿಗೂ ಬಯಲು ಮಾಡುವುದಕ್ಕಾಗಿಯೇ ತಾವು ಹೀಗೆ ಮಾಡಿರುವುದಾಗಿ ಅವರು ಹೇಳಿರುವರು.

The Kallumbhoomi
20.8.45.

The Kallumbhoomi publishes a report of the arrest of Mr. N.C. Shivma Reddy.

Submitted

K.

The Janavani
20.8.45



Stop Press

ಆಜ್ಞೆ ಮುರಿಯುವುದಾಗಿ
ಶ್ರೀ ತಿಮ್ಮಾರೆಡ್ಡಿ ಹೇಳಿಕೆ

ಬೆಂಗಳೂರು ೩೦
ತಮ್ಮನ್ನು ೧೯೪೫ ನೆಯ ಡಿಟೆನ್ಷನ್ ಮತ್ತು ರಿಸ್ಟ್ರಿಕ್ಷನ್ ಕಾನೂನಿನ ಅಧಿಕಾರದ ಮೇಲೆ ಬಂಧಿಸಿರುವುದನ್ನು ಪ್ರತಿಭಟಿಸಲು ತಾವು ಇಂದು ಪ್ರಾತಃಕಾಲ ೧೦ ಗಂಟೆಗೆ ಆಜ್ಞೋಲ್ಲಂಘನ ಮಾಡುವುದಾಗಿ ಶ್ರೀ ತಿಮ್ಮಾರೆಡ್ಡಿಯವರು ಅಧಿಕಾರಿಗಳಿಗೆ ತಿಳಿಸಿದ್ದಾರೆಂದು ಮೈಸೂರು ಕಾಂಗ್ರೆಸ್ ಪ್ರಕಟಣಾಧಿಕಾರಿ ಶ್ರೀ ಕೆ ಆರ್ ಮಾಧವರಾಯರು ಪ್ರಚುರಪಡಿಸಿದ್ದಾರೆ.

ಗೋರಿಬಿದನೂರಿನಲ್ಲಿ
ದಸ್ತಗಿರಿ

ಶ್ರೀ ತಿಮ್ಮಾರೆಡ್ಡಿಯವರನ್ನು ಪೋಲೀಸರು ಗೋರಿಬಿದನೂರಿನಲ್ಲಿ ದಸ್ತಗಿರಿ ಮಾಡಿ ಕೋಲಾರಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಮ್ಯಾಜಿಸ್ಟ್ರೇಟರ ಸಮಕ್ಷದಲ್ಲಿ ಹಾಜರ್ಪಡಿಸಿದರೆಂದು ತಂತಿ ಬಂದಿದೆ.

The Janavani reports that Mr. N. C. Thimmareddy has been arrested.

Submitted

ಶ್ರೀ ತಿಮ್ಮಾರೆಡ್ಡಿಯವರ ಬಂಧನದ ಬಗ್ಗೆ ಕಾಂಗ್ರೆಸ್ ಮುಖಂಡರ ಹೇಳಿಕೆ

★

ಶ್ರೀ ಕೆ. ಟಿ. ಭಾಷ್ಯಂ

ಶ್ರೀ ತಿಮ್ಮಾರೆಡ್ಡಿಯವರ ಮೇಲೆ ಹಾಕಿರುವ ಪ್ರತಿಬಂಧಕಾಜ್ಞೆ ಕೆಡುಕಿನದು. ಸರ್ಕಾರವು ತನ್ನ ನೀತಿ ವಿಮರ್ಶೆಗೆ ಅವಕಾಶ ಕೊಡಲಾರದೆಂಬುದು ಮತ್ತಷ್ಟು ಖಂಡನೀಯ.

ಸರ್ಕಾರದವರು ಶ್ರೀ ತಿಮ್ಮಾರೆಡ್ಡಿಯವರ ಮೇಲೆ ಪ್ರತಿಬಂಧಕ ಹೇರಲು ಕಾರಣವೇನೂ ಕೊಟ್ಟಿಲ್ಲ ಅವರು ನಾಗಸಂದ್ರದಲ್ಲಿಯೇ ಆರು ತಿಂಗಳ ಕಾಲವಿದ್ದು, ಪತ್ರಿಕೆಗಳಿಗೆ ಹೇಳಿಕೆಗಳನ್ನು ಕೊಡಬಹುದಾಗಲಿ, ಸಾರ್ವಜನಿಕ ಅಥವಾ ಅರೆಬರೆ ಸಾರ್ವಜನಿಕ—ಇದರರ್ಥವೇನೋ?—ಭಾಷಣಗಳನ್ನಾಗಲಿ ಮಾಡಕೂಡದೆಂಬುದು ಆಜ್ಞೆಯ ಸಾರಾಂಶ

ಶ್ರೀ ತಿಮ್ಮಾರೆಡ್ಡಿಯವರ ಸಾರ್ವಜನಿಕ ಚಟುವಟಿಕೆಗಳನ್ನು ನೋಡುತ್ತಿದ್ದವರಿಗೆ ಅವರು ಕಾಲಗತಿಯನ್ನನುಸರಿಸಿ ಈ ಆಡಳಿತ ವ್ಯವಸ್ಥೆಯ ಬದಲಾಗಬೇಕೆಂಬ ಸಾರ್ವಜನಿಕಾಭಿಪ್ರಾಯವನ್ನು ಉತ್ಸೇಕರಹಿತ ಭಾಷೆಯಲ್ಲಿ ಪ್ರತಿಪಾದಿಸುತ್ತಿದ್ದುದು ತಪ್ಪಲ್ಲವೆಂದು ಸ್ಪಷ್ಟವಾಗುತ್ತದೆ

ಶ್ರೀ ತಿಮ್ಮಾರೆಡ್ಡಿಯವರು ಸಾರ್ವಜನಿಕ ಕಾರ್ಯಕರ್ತರೆ ಸರಿಯಾಗಿಯೆ ಭಾರತವು ಸ್ವಾತಂತ್ರ್ಯವನ್ನು ಕೇಳುತ್ತಿದೆ. ಲೇಂದ್ರದಲ್ಲಿ ಸ್ವತಂತ್ರ ಸರ್ಕಾರ ಶೀಘ್ರದಲ್ಲಿಯೇ ಸ್ಥಾಪನೆಯಾಗಲಿದೆ ಈ ಭಾವೀ ರಾಷ್ಟ್ರದಲ್ಲಿ ವೈದೀ ಸಂಸ್ಥಾನ ಪ್ರಜೆಗಳ ಸ್ಥಾನವೇನು? ಅವರು ಮೂಕ ಪ್ರೇಕ್ಷೆಗಳಂತೆ ಜೀವಿಸಬೇಕೇ?—ಥವಾ ಸ್ವತಂತ್ರ ಭಾರತ ಆಡಳಿತ ಯಂತ್ರದಲ್ಲಿ ಅವರಿಗೂ ಸ್ಥಾನವುಂಟೇ? ಈ ಪ್ರಾಮುಖಿಕ ಪ್ರಶ್ನೆಗಳ ಮೇಲೆ ಸಲಹೆ ಕೊಡಲು ನಮ್ಮ ಸಂಸ್ಥಾನದಲ್ಲಿ ರಾಜಕಾರಣ ಪಟುಗಳಿಲ್ಲವೆಂದು ಭಾವಿಸಿ ನಮ್ಮ ಸರ್ಕಾರದವರು ಮದ್ರಾಸಿನವರೊಬ್ಬರನ್ನು ನೇಮಿಸಿಲ್ಲವೇ? ಶ್ರೀ ತಿಮ್ಮಾರೆಡ್ಡಿಯವರೂ ತಪ್ಪು ಸಲಹೆ ಕೊಟ್ಟರೆ ಅದರಲ್ಲಿ ತರ್ಕಾದರವೂ ಸುಸ್ತು? ಸರ್ಕಾರದವರು ಅವರ ಸಲಹೆಗಳನ್ನು ಪುರಸ್ಕರಿಸಬಹುದಾಗಲಿ ನಿರಾಕರಿಸಬಹುದಾಗಲಿ ಬೇರೆ ಪ್ರಶ್ನೆ. ಅವರಿಗೆ ಮಾರ್ಗದರ್ಶನವೇಕೆ? ಬೆಂಗಳೂರಿನ್ನು ಬಿಟ್ಟು ಹೋಗುವಂತೆ ಆಜ್ಞೆಯೇಕೆ? ಶ್ರೀ ತಿಮ್ಮಾರೆಡ್ಡಿಯವರು ಅದರಂತೆಯೇ ಯೋಚಿಸುವ ಸಹಸ್ರಾರು ಪ್ರಜೆಗಳ ಪ್ರತಿನಿಧಿಯೆಂದು ಸರ್ಕಾರ ತಿಳಿಯದೇ?

ಪ್ರಪಂಚದಲ್ಲಿ ವಿಚಿತ್ರಗಳನೇಕ ಬ್ರಿಟನ್ನಿನಲ್ಲಿ ಯುರೋಪ್ ಯುದ್ಧ ಮುಗಿದ ಒಂದು ವಾರದಲ್ಲಿ ರಕ್ಷಣಾ ಶಾಸನ ರದ್ದಾಯಿತು. ಅಲ್ಲಿನ ಸರ್ಕಾರಿ ಅಸುಧಾರಣೆ ಅಚರಣೆಗೆ ತಂದಲು ಜಪಾನ ಯುದ್ಧ ಮುಗಿಯಲು ಕಾಯಲಿಲ್ಲ ನಮ್ಮ ದೇಶದಲ್ಲಿ ವಿಶ್ವದಲ್ಲಿ ಮೈತ್ರಿಗಳೆಲ್ಲ ತೊನೆಗಂಡು, ಶಾಂತಿ ನೆಲಸುವ ವೇಳೆ, ವ್ಯಕ್ತಿ ಸ್ವಾತಂತ್ರ್ಯ ಮಣ್ಣು ಪಾಲಾಗುತ್ತದೆ ಜಪಾನಿನಂತಹ ಶತ್ರುರಾಷ್ಟ್ರ ಪ್ರಜಾಸತ್ತಾತ್ಮಕ ಸರ್ಕಾರ ಸ್ಥಾಪಿಸಲವಕಾಶವಿದೆ ಆದರೆ ರಾಜಭಕ್ತ, ನಮ್ಮ ಮಿತ್ರ ಸಂಸ್ಥಾನವಾದ ಮೈಸೂರು ನಿರಂಕುಶ ಆಡಳಿತ ತತ್ತ್ವಗಿದೆ! ಇದು ನ್ಯಾಯವೇ? ಈ ಸನ್ನಾಸಕ್ಕಾಗಿಯೇ ನಮ್ಮ ಜನರು ಕಷ್ಟಸಂಕಟಗಳನ್ನನುಭವಿಸಿ ಇಷ್ಟು ಕಾಲ ಮಿತ್ರರಿಗೆ ನೆರವಾಗಿ ತಂತು ಸ್ವಾತಂತ್ರ್ಯ ಶತ್ರುಗಳನ್ನು ಸೆದೆ ಬಡಿದಿತೆ? ಇದಕ್ಕಾಗಿಯೇ ಪ್ರಾಣಗಳು ಅರಿಹೊಟ್ಟಿತೆಂದು, ಅರೆವಸ್ತ್ರ ಧರಿಸಿ ಅನೇಕ ಕಷ್ಟಗಳನ್ನು ನುಂಗಿಕೊಂಡದ್ದು? ಭಾರತದ ಪ್ರತಿನಿಧಿಗಳು ಸಾನ್ ಫ್ರಾನ್ಸಿಸ್ಕೋಗೆ ಹೋದುದು ಪಾಠಕ್ಕಾಗಿಯೇ?

ಬ್ರಿಟಿಷ್ ಇಂಡಿಯದಲ್ಲಿ ಸಮಾ ಪರಿಸ್ಥಿತಿ ಉತ್ಪನ್ನಗೊಂಡಿದೆ ಕಾಂಗ್ರೆಸ್ ಸಂಸ್ಥೆಗಳ ಮೇಲಿನ ನಿರ್ಬಂಧಗಳು ತೆಗೆಯಲಾಗುತ್ತಿದೆ ಶಾಸನ ಸಭೆಗೆ ಸ್ಪರ್ಧಿಸಲು ನಿರ್ಬಂಧ ಆಯೋಗ್ಯತೆ ಬ್ರಿಟಿಷ್ ಭಾರತದಲ್ಲಿ ವಿಧಿಸಲಾಗಿಲ್ಲ ಸಾರ್ವಜನಿಕ ಜೀವನದಲ್ಲಿರುವ ನಮ್ಮ ಗಾಂಧಿ ಈ ಅಪಾಯಗಳನ್ನು ಇದಿರಿಸಬೇಡವೇ? ತಿಮ್ಮಾರೆಡ್ಡಿಯವರು ಮಾಡಿದ ಅಪರಾಧವೇನು?

ಈಗಿನ ಆಡಳಿತ ಪದ್ಧತಿ ಬದಲಾಯಿಸಲೇ ಬೇಕು. ವಿಶೇಷ ಪರಿಸ್ಥಿತಿಯಲ್ಲಿರಬೇಕಾದಂತೆ ನಮ್ಮ ಸಾರಥಿತ್ವ ಹೋಗಬೇಕು, ಗುಲಾಮಗಿರಿ ತೊಲಗಬೇಕು ನಮಗೆ ಪ್ರಜಾಸರ್ಕಾರ ಬೇಕು—ಜವಾಬ್ದಾರಿ ಸರ್ಕಾರಬೇಕು. ತಾವು ನೇಮಿಸಿದ ಸರ್ಕಾರವನ್ನು ಇರಿಸುವುದಕ್ಕಾಗಲಿ ತೆಗೆಸುವುದಕ್ಕಾಗಲಿ ನಮ್ಮ ಜನ ಶಕ್ತರಿರಬೇಕು ಪ್ರಜಾಭಿಪ್ರಾಯಕ್ಕೆ ಮನ್ನಣೆ ಕೊಡುವ ಸಚಿವರು ಹೆಗೆಯಲ್ಪಡಬೇಕು. ನಮ್ಮ ತಪ್ಪುಗಳನ್ನು ನಾವೇ ತಿದ್ದಿಕೊಳ್ಳುವಂತಿರಬೇಕು. ಅದೇ ಗೌರವಯುತ ಜೀವನ. ಬಡವನಾಗಬೇಡ? ಸ್ವತಂತ್ರನಿಗೇ ಗೌರವ ದಾಸನಿಗೆ ಅರಿಯಿದ್ದರೂ ಗೌರವವೆಲ್ಲಿಯದು?

ಶ್ರೀಗಳಾದ ಎಸ. ಚನ್ನಯ್ಯ, ಮರಿಯಪ್ಪ

"ಯುದ್ಧ ಮುಗಿದು, ಶಾಂತಿಗಾಗಿ ವಿಶೇಷ ಶಾಸನಾನುಗಳೆಲ್ಲಾ ವ್ಯಾಯವಾಗುತ್ತಿವೆ. ಪ್ರಾಂತಗಳಲ್ಲಿ ಧನಃ ಕಾಂಗ್ರೆಸ್ ಸರ್ಕಾರ ಸ್ಥಾಪನಾಪ್ರಯತ್ನ ನಡೆಯುತ್ತಿದೆ. ವೈಸ್ರಾಯರು ಸಹ ಕಾಂಗ್ರೆಸ್‌ನ ಸಹಕಾರ ಕೇಳಿದ್ದಾರೆ ಚೀಮೂರು ಆಸ್ಥಿ ಪ್ರಕೆಂಗದ ಆಪದಿತಂಗೆ ಮರಣದಂಡನೆ ವಜಾ ಆಗಿದೆ ಹೀಗಿರುವಾಗ ಮೈಸೂರು ದೇಶದಲ್ಲಿ ಒಂದೆ ನಡೆದ ಗಲಭೆಗಳ ಆಪಾದಿತರು ಗಲ್ಲಿಗೇರಿಸಲ್ಪಟ್ಟಿರುವ ಕಾಂಗ್ರೆಸ್ ಕಾರ್ಯಕ್ರಮಗಳಿಗೆ ಪ್ರತಿಬಂಧಕ ವ್ಯಾಪಾರ ಕ್ಷಲೇ ಇದೆ. ಇತ್ತೀಚೆಗೆ ಶ್ರೀ ತಿಮ್ಮಾರೆಡ್ಡಿಯವರ ವ್ಯಕ್ತಿ ಸ್ವಾತಂತ್ರ್ಯಕ್ಕೂ ಭಂಗ ತರಲಾಗಿದೆ.

ನಮ್ಮ ಸರ್ಕಾರದವರ ಈ ತರದ ವರ್ತನೆಯು ದೇಶ ನಿಶ್ಚೇಷ್ಟೆಯಲ್ಲಿ ಖಂಡಿತಾ ಒಳ್ಳೆಯದಲ್ಲ" ಎಂಬುದಾಗಿ ಮೈಸೂರು ಕಾಂಗ್ರೆಸ್ ಮುಖಂಡರಾದ ಶ್ರೀ ಎಸ್. ಚನ್ನಯ್ಯ, ಮರಿಯಪ್ಪ ಮುಂತಾದ ಕಾಂಗ್ರೆಸ್ ನಾಯಕರುಗಳೂ ಒಂದು ಹೇಳಿಕೆ ಯನ್ನಿತ್ತಿದ್ದಾರೆ.

ಶ್ರೀ ಕೆ. ಆರ್! ಮಾಧವರಾಯರು

"ಇಂದು ಮೈಸೂರಿನ ದೂರದೃಷ್ಟಿಯಿರುವ ರಾಜಕಾರಣಿಗಳು ಆಡಳಿತಕ್ಕೆ ಅಗತ್ಯ ಯುದ್ಧೋದ್ಯಮಕ್ಕೆ ನಮ್ಮ ಸಂಸ್ಥಾನದ ಪ್ರಜೆಗಳು ಅತಿಯಾಗಿ ತ್ಯಾಗ ಮಾಡಿದ್ದಾರೆ ಯುದ್ಧ ಮುಗಿದ ಮೇಲಾದ ಬಡತನ, ನಿರುದ್ಯೋಗ, ರೋಗಗಳು ನಮ್ಮ ಜನಗಳ ಪಾಲಾಗಬೇಕೇ? ಇವುಗಳೇ ಅಲ್ಲದೆ ಪ್ರತಿಬಂಧಕಾಜ್ಞೆ ದಸ್ತಗಿರಿಗಳು ಬೇರೆ! ನಮಗೀ ದುರ್ದೆಶೆ ಬೇಡ ನಮಗೆ ಶಾಂತಿ ಬೇಕು, ಸಮೃದ್ಧಿ ಬೇಕು ನಮ್ಮ ಹೊನ್ನಿನ ಗಣಿ ನಮಗಿರಬೇಕು ಭಕ್ಷ್ಯಾಲಂಕಾರ ಪದಾರ್ಥಗಳು ನಮಗಿರಬೇಕು—ನಮ್ಮ ಕೈಗಾರಿಕೆ ವ್ಯವಸಾಯ ಏಳಿಗೆಯು ನಮ್ಮಲ್ಲಿರಬೇಕು ಪ್ರತಿ ಸಾಗುವಳಿಗೆ ಬಾಳ್ವೆಯಿರಬೇಕು ಗೌರವವಿರಬೇಕು ಈಗಿನ ನಿರಂಕುಶಾಧಿಕಾರ ಹೋಗಬೇಕು.